# ಭಾರತೀಯ ಪಶುವೈದ್ಯಕೀಯ ಪರಿಷತ್ತು ಅಧಿನಿಯಮ, 1984

(1984ರ ಅಧಿನಿಯಮ ಸಂಖ್ಯೆ 52)

**[23.02.2004ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 28ನೇ ಸಂಪುಟದ 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 18 ರಿಂದ 42ರ ವರೆಗಿನ ಪುಟಗಳಲ್ಲಿ ಪ್ರಕಟಿತ]**

**ವಿಷಯಾನುಕ್ರಮಣಿಕೆ**

**ಪ್ರಕರಣಗಳು:**

**ಅಧ್ಯಾಯ- I**

**ಪ್ರಾರಂಭಿಕ**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

**ಅಧ್ಯಾಯ-II**

**ಭಾರತೀಯ ಪಶುವೈದ್ಯಕೀಯ ಪರಿಷತ್ತು**

3. ಪರಿಷತ್ತಿನ ಸ್ಥಾಪನೆ ಮತ್ತು ರಚನೆ
4. ಸದಸ್ಯರ ಚುನಾವಣೆ ವಿಧಾನ
5. ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರ ಪದಾವಧಿ
6. ಸದಸ್ಯತ್ವ ಕೊನೆಗೊಳ್ಳುವುದು
7. ಆಕಸ್ಮಿಕ ಖಾಲಿ ಸ್ಥಾನಗಳು
8. ರಾಜೀನಾಮೆ
9. ಪರಿಷತ್ತಿನ ಸಭೆಗಳು
10. ಪರಿಷತ್ತಿನಲ್ಲಿನ ಖಾಲಿ ಸ್ಥಾನಗಳು ಕಾರ್ಯಗಳನ್ನು ಅಸಿಂಧುಗೊಳಿಸದಿರುವುದು, ಇತ್ಯಾದಿ
11. ಕಾರ್ಯದರ್ಶಿಯ ಮತ್ತು ಇತರ ಅಧಿಕಾರಿಗಳ ಅಥವಾ ನೌಕರರ ನೇಮಕಾತಿ
12. ಕಾರ್ಯನಿರ್ವಾಹಕ ಸಮಿತಿಗಳು ಮತ್ತು ಇತರ ಸಮಿತಿಗಳು
13. ಫೀಜುಗಳು ಮತ್ತು ಭತ್ಯೆಗಳು
14. ಪರಿಷತ್ತು ಒದಗಿಸಬೇಕಾದ ಮಾಹಿತಿ ಮತ್ತು ಅದರ ಪ್ರಕಟಣೆ
15. ಭಾರತದಲ್ಲಿನ ಪಶು ವೈದ್ಯಕೀಯ ಸಂಸ್ಥೆಗಳು ನೀಡಿದ ಪಶು ವೈದ್ಯಕೀಯ ವಿದ್ಯಾರ್ಹತೆಗಳಿಗೆ ಮನ್ನಣೆ ನೀಡುವುದು
16. ಪರಸ್ಪರ ಮನ್ನಣೆ ನೀಡಿಕೆ ವ್ಯವಸ್ಥೆಯುಳ್ಳ ದೇಶಗಳಲ್ಲಿನ ಪಶು ವೈದ್ಯಕೀಯ ಸಂಸ್ಥೆಗಳು ನೀಡುವ ಪಶು ವೈದ್ಯಕೀಯ ವಿದ್ಯಾರ್ಹತೆಗಳಿಗೆ ಮನ್ನಣೆ ನೀಡುವುದು
17. ಪರಸ್ಪರ ಮನ್ನಣೆ ನೀಡಿಕೆ ವ್ಯವಸ್ಥೆ ಇಲ್ಲದಂಥ ದೇಶಗಳಲ್ಲಿನ ಪಶು ವೈದ್ಯಕೀಯ ಸಂಸ್ಥೆಗಳು ನೀಡಿದ ಪಶು ವೈದ್ಯ ವಿದ್ಯಾರ್ಹತೆಗಳಿಗೆ ಮನ್ನಣೆ ನೀಡುವುದಕ್ಕಾಗಿ ಕೆಲವು ಪ್ರಕರಣಗಳಲ್ಲಿ ವಿಶೇಷ ಉಪಬಂಧಗಳು

18. ಅಧ್ಯಯನ ಕೋರ್ಸ್‌ಗಳ ಮತ್ತು ಪರೀಕ್ಷೆಗಳ ಬಗ್ಗೆ ಮಾಹಿತಿಯನ್ನು ಅಗತ್ಯಪಡಿಸಲು ಅಧಿಕಾರ
19. ಪಶು ವೈದ್ಯಕೀಯ ಸಂಸ್ಥೆಗಳ ಮತ್ತು ಪರೀಕ್ಷೆಗಳ ಪರಿಶೀಲನೆ
20. ಸಂದರ್ಶಕರ ನೇಮಕಾತಿ
21. ಮನ್ನಣೆಯನ್ನು ಹಿಂತೆಗೆದುಕೊಳ್ಳುವುದು
22. ಪಶು ವೈದ್ಯಕೀಯ ಶಿಕ್ಷಣದ ಕನಿಷ್ಠ ಗುಣಮಟ್ಟಗಳು

**ಅಧ್ಯಾಯ-III**

**ಭಾರತೀಯ ಪಶುವೈದ್ಯಕೀಯ ವೃತ್ತಿಗಾರರ ರಿಜಿಸ್ಟರು**

23. ಭಾರತೀಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರು
24. ಭಾರತೀಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರಿನಲ್ಲಿ ನೋಂದಣಿ
25. ನೋಂದಣಿಯ ಪ್ರಮಾಣಪತ್ರದ ನೀಡಿಕೆ
26. ಹೆಚ್ಚಿನ ಅರ್ಹತೆಗಳ ನೋಂದಣಿ
27. ಭಾರತೀಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರಿನಿಂದ ಹೆಸರುಗಳನ್ನು ತೆಗೆದುಹಾಕುವುದು
28. ಭಾರತೀಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರಿನಲ್ಲಿ ಸೇರಿಸಲಾದ ವ್ಯಕ್ತಿಯು ವಾಸಸ್ಥಳದ ಅಥವಾ ವೃತ್ತಿಯ ಸ್ಥಳದ ಬದಲಾವಣೆಯನ್ನು ಕುರಿತು ಸೂಚನೆ ನೀಡುವುದು

**ಅಧ್ಯಾಯ-IV**

**ನೋಂದಾಯಿತ ಪಶುವೈದ್ಯಕೀಯ ವೃತ್ತಿಗಾರರ ವಿಶೇಷಾಧಿಕಾರಗಳು**

29. ಭಾರತೀಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರಿನಲ್ಲಿ ಸೇರಿಸಲಾದ ವ್ಯಕ್ತಿಗಳ ವಿಶೇಷ ಅಧಿಕಾರಗಳು
30. ಭಾರತೀಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರಿನಲ್ಲಿ ನೋಂದಾಯಿಸಲಾದಂಥ ವ್ಯಕ್ತಿಗಳ ಹಕ್ಕುಗಳು

**ಅಧ್ಯಾಯ-V**

**ಶಿಸ್ತು ಪಾಲನೆ**

31. ವೃತ್ತೀಯ ನಡತೆ

**ಅಧ್ಯಾಯ-VI**

**ರಾಜ್ಯ ಪಶುವೈದ್ಯಕೀಯ ಪರಿಷತ್ತುಗಳು**

32. ರಾಜ್ಯ ಪಶು ವೈದ್ಯಕೀಯ ಪರಿಷತ್ತುಗಳ ಸ್ಥಾಪನೆ ಮತ್ತು ರಚನೆ
33. ಅಂತರ್‌ರಾಜ್ಯ ಒಪ್ಪಂದಗಳು
34. ಜಂಟಿ ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ರಚನೆ
35. ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ನಿಗಮನ
36. ಅಧ್ಯಕ್ಷ
37. ಚುನಾವಣಾ ವಿಧಾನ

38. ಪದಾವಧಿಗಳು ಮತ್ತು ಸಾಂದರ್ಭಿಕ ಖಾಲಿ ಸ್ಥಾನಗಳು
39. ರಾಜೀನಾಮೆ
40. ಕಾರ್ಯನಿರ್ವಾಹಕ ಮತ್ತು ಇತರ ಸಮಿತಿಗಳು
41. ಫೀಜುಗಳು ಮತ್ತು ಭತ್ಯಗಳು
42. ರಿಜಿಸ್ಟ್ರಾರನ ಮತ್ತು ಇತರ ಅಧಿಕಾರಿಗಳ ಅಥವಾ ನೌಕರರ ನೇಮಕ
43. ರಾಜ್ಯ ಪಶು ವೈದ್ಯಕೀಯ ಪರಿಷತ್ತು ಒದಗಿಸಬೇಕಾದ ಮಾಹಿತಿ

## ಅಧ್ಯಾಯ-VII

### ನೋಂದಣಿ

44. ರಾಜ್ಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರನ್ನು ತಯಾರಿಸುವುದು ಮತ್ತು ನಿರ್ವಹಿಸುವುದು
45. ರಿಜಿಸ್ಟರನ್ನು ಆರಂಭದಲ್ಲಿ ತಯಾರಿಸುವುದು
46. ರಿಜಿಸ್ಟರು ತಯಾರಾಗುವಾಗ ನಮೂದಾಗುವ ಅರ್ಹತೆಗಳು
47. ನೋಂದಣಿಗಾಗಿನ ಅರ್ಜಿಗಳ ಪರಿಶೀಲನೆ
48. ನವೀಕರಣದ ಫೀಜುಗಳು
49. ರಿಜಿಸ್ಟರಿನಿಂದ ತೆಗೆದುಹಾಕುವುದು
50. ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಲ್ಲಿ ಪುನಃ ನಮೂದು ಮಾಡುವುದು
51. ರಾಜ್ಯ ಪಶು ವೈದ್ಯಕೀಯ ರಿಜಿಸ್ಟರನ್ನು ಮುದ್ರಿಸುವುದು

## ಅಧ್ಯಾಯ-VIII

### ಸಂಕೀರ್ಣ

52. ನೋಂದಣಿಯ ವರ್ಗಾವಣೆ
53. ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ
54. ನಕಲು ಪ್ರಮಾಣ ಪತ್ರಗಳ ನೀಡಿಕೆ
55. ನೋಂದಾಯಿಸಲಾಗಿದೆ ಎಂದು ಸುಳ್ಳು ಕ್ಲೇಮು ಮಾಡಿದ್ದಕ್ಕೆ ದಂಡ
56. ಅಂಕಿತನಾಮಗಳ ದುರುಪಯೋಗ
57. ನೋಂದಾಯಿಸಿಲ್ಲದ ವ್ಯಕ್ತಿಗಳು ವೃತ್ತಿ ನಡೆಸಬಾರದು
58. ನೋಂದಣಿ ಪ್ರಮಾಣ ಪತ್ರವನ್ನು ಮರಳಿ ಒಪ್ಪಿಸಲು ತಪ್ಪುವುದು
59. ಅಪರಾಧದ ಸಂಜ್ಞಾನ
60. ದಾವೆಗೆ ಮತ್ತು ಇತರ ಕಾನೂನು ವ್ಯವಹರಣೆಗೆ ಪ್ರತಿಷೇಧ
61. ಪರಿಷತ್ತಿಗೆ ಫೀಜುಗಳ ಭಾಗವನ್ನು ಸಂದಾಯ ಮಾಡುವುದು
62. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ
63. ವಿಚಾರಣಾ ಆಯೋಗದ ನೇಮಕ
64. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ

65. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ
66. ವಿನಿಯಮ ರಚನಾಧಿಕಾರ
67. ನಿರಸನ ಮತ್ತು ಉಳಿಸುವಿಕೆ
ಮೊದಲನೇ ಅನುಸೂಚಿ
ಎರಡನೇ ಅನುಸೂಚಿ

# ಭಾರತೀಯ ಪಶುವೈದ್ಯಕೀಯ ಪರಿಷತ್ತು ಅಧಿನಿಯಮ, 1984

(1984ರ ಅಧಿನಿಯಮ ಸಂಖ್ಯೆ 52)

[ಆಗಸ್ಟ್ 18, 1984]

ಪಶು ವೈದ್ಯಕೀಯ ವೃತ್ತಿಯನ್ನು ವಿನಿಯಮಿಸಲು ಮತ್ತು ಆ ಉದ್ದೇಶಕ್ಕಾಗಿ ಭಾರತೀಯ ಪಶು ವೈದ್ಯಕೀಯ ಪರಿಷತ್ತಿನ ಮತ್ತು ರಾಜ್ಯಪಶು ವೈದ್ಯಕೀಯ ಪರಿಷತ್ತುಗಳ ಸ್ಥಾಪನೆ ಮತ್ತು ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರುಗಳ ನಿರ್ವಹಣೆ ಬಗ್ಗೆ ಮತ್ತು ಅವುಗಳಿಗೆ ಸಂಬಂಧಪಟ್ಟ ಪೂರಕ ವಿಷಯಗಳ ಬಗ್ಗೆ ಉಪಬಂಧಿಸುವ ಅಧಿನಿಯಮ.

ಪಶು ವೈದ್ಯಕೀಯ ವೃತ್ತಿಯ ವಿನಿಯಮನಕ್ಕೆ ಮತ್ತು ಆ ಉದ್ದೇಶಕ್ಕಾಗಿ ಭಾರತೀಯ ಪಶು ವೈದ್ಯಕೀಯ ಪರಿಷತ್ತಿನ ಮತ್ತು ರಾಜ್ಯ ಪಶು ವೈದ್ಯಕೀಯ ಪರಿಷತ್ತುಗಳ ಸ್ಥಾಪನೆ ಮತ್ತು ಇಡೀ ಭಾರತದಲ್ಲಿ ಪಶು ವೈದ್ಯಕೀಯ ವೃತ್ತಿಯಲ್ಲಿ ತೊಡಗಲು ಅರ್ಹರಾದ ವ್ಯಕ್ತಿಗಳ ರಿಜಿಸ್ಟರುಗಳ ನಿರ್ವಹಣೆ ಬಗ್ಗೆ ಮತ್ತು ಅದಕ್ಕೆ ಸಂಬಂಧಿಸಿದ ಪೂರಕ ವಿಷಯಗಳ ಬಗ್ಗೆ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಮತ್ತು ಸಂಸತ್ತು, ಸಂವಿಧಾನದ 249 ಮತ್ತು 250ನೇ ಅನುಚ್ಛೇದದಲ್ಲಿ ಉಪಬಂಧಿಸಿದುದನ್ನು ಹೊರತುಪಡಿಸಿ ಮೇಲಿನ ವಿಷಯಗಳಲ್ಲಿ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ರಾಜ್ಯಗಳಿಗಾಗಿ ಕಾನೂನುಗಳನ್ನು ರಚಿಸಲು ಅಧಿಕಾರಗಳನ್ನು ಹೊಂದಿಲ್ಲದಿರುವುದರಿಂದ;

ಮತ್ತು ಸಂವಿಧಾನದ 252ನೇ ಅನುಚ್ಛೇದದ (1)ನೇ ಖಂಡಕ್ಕನುಸಾರವಾಗಿ, ಹರಿಯಾಣ, ಬಿಹಾರ, ಒರಿಸ್ಸಾ, ಹಿಮಾಚಲ ಪ್ರದೇಶ ಮತ್ತು ರಾಜಸ್ಥಾನ – ಈ ರಾಜ್ಯಗಳ ವಿಧಾನ ಮಂಡಲಗಳ ಎಲ್ಲಾ ಸದನಗಳು, ಮೇಲ್ಕಂಡ ವಿಷಯಗಳನ್ನು ಆ ರಾಜ್ಯಗಳಲ್ಲಿ, ಸಂಸತ್ತು ಕಾನೂನಿನ ಮೂಲಕ, ವಿನಿಯಮಿಸಬೇಕೆಂಬುದಾಗಿ ನಿರ್ಣಯಗಳನ್ನು ಕೈಗೊಂಡಿರುವುದರಿಂದ;

ಇದನ್ನು, ಭಾರತ ಗಣರಾಜ್ಯದ ಮೂವತ್ತೈದನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ:–

## ಅಧ್ಯಾಯ–I

## ಪ್ರಾರಂಭಿಕ

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಭಾರತೀಯ ಪಶು ವೈದ್ಯಕೀಯ ಪರಿಷತ್ತು ಅಧಿನಿಯಮ, 1984 ಎಂದು ಕರೆಯತಕ್ಕುದು.

(2) ಇದು, ಮೊದಲ ಹಂತದಲ್ಲಿ, ಪೂರ್ಣವಾಗಿ ಹರಿಯಾಣ, ಬಿಹಾರ, ಒರಿಸ್ಸಾ, ಹಿಮಾಚಲ ಪ್ರದೇಶ ಮತ್ತು ರಾಜಸ್ಥಾನ – ಈ ರಾಜ್ಯಗಳಲ್ಲಿ ಮತ್ತು ಎಲ್ಲಾ ಕೇಂದ್ರಾಡಳಿತ ಪ್ರದೇಶಗಳಿಗೆ ವ್ಯಾಪ್ತವಾಗುತ್ತದೆ ಮತ್ತು ಇದು ಸಂವಿಧಾನದ 252ನೇ ಅನುಚ್ಛೇದದ (1)ನೇ ಖಂಡಕ್ಕೆ ಅನುಸಾರವಾಗಿ ಈ ಸಂಬಂಧದಲ್ಲಿ ಅಂಗೀಕರಿಸಿದ ನಿರ್ಣಯಗಳ ಮೂಲಕ ಈ ಅಧಿನಿಯಮವನ್ನು ಯಾವ ರಾಜ್ಯಗಳು ಅಳವಡಿಸಿಕೊಳ್ಳಬಹುದೋ, ಆ ರಾಜ್ಯಗಳಿಗೂ ಸಹ ವ್ಯಾಪ್ತವಾಗತಕ್ಕುದು.

(3) ಯಾವ ರಾಜ್ಯದಲ್ಲಿ ಅಥವಾ ಒಕ್ಕೂಟ ರಾಜ್ಯ ಕ್ಷೇತ್ರಗಳಲ್ಲಿ ಇದನ್ನು ವ್ಯಾಪ್ತಗೊಳಿಸಲಾಗಿದೆಯೋ ಅಥವಾ ಇನ್ನು ಮುಂದೆ ವ್ಯಾಪ್ತಗೊಳಿಸಬಹುದೋ, ಆ ರಾಜ್ಯದಲ್ಲಿ ಅಥವಾ ಆ ಒಕ್ಕೂಟ ರಾಜ್ಯ ಕ್ಷೇತ್ರಗಳಲ್ಲಿ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ವಿವಿಧ ಉಪಬಂಧಗಳಿಗಾಗಿ ಅಥವಾ ವಿವಿಧ ರಾಜ್ಯಗಳಿಗಾಗಿ ಅಥವಾ ಒಕ್ಕೂಟ ರಾಜ್ಯ ಕ್ಷೇತ್ರಗಳಿಗಾಗಿ ನೇಮಕ ಮಾಡಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕುದು.

2. **ಪರಿಭಾಷೆಗಳು.**– ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಪರಿಷತ್ತು" ಎಂದರೆ 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಭಾರತೀಯ ಪಶು ವೈದ್ಯಕೀಯ ಪರಿಷತ್ತು;

(ಬಿ) "ಸದಸ್ಯ" ಎಂದರೆ ಪರಿಷತ್ತಿನ ಸದಸ್ಯ;

(ಸಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳಿಂದ ನಿಯಮಿಸಲಾದುದು;

(ಡಿ) "ಅಧ್ಯಕ್ಷ" ಎಂದರೆ ಪರಿಷತ್ತಿನ ಅಧ್ಯಕ್ಷ;

(ಇ) "ಮನ್ನಣೆ ಪಡೆದ ಪಶು ವೈದ್ಯಕೀಯ ವಿದ್ಯಾರ್ಹತೆಗಳು" ಎಂದರೆ ಮೊದಲನೇ ಅನುಸೂಚಿ ಅಥವಾ ಎರಡನೇ ಅನುಸೂಚಿಯಲ್ಲಿ ಒಳಗೊಂಡಿರುವ ಯಾವುದೇ ಪಶುವೈದ್ಯಕೀಯ ವಿದ್ಯಾರ್ಹತೆಗಳು;

(ಎಫ್) "ರಿಜಿಸ್ಟರು" ಎಂದರೆ ಈ ಅಧಿನಿಯಮದ ಮೇರೆಗೆ ಇಡಬೇಕಾದ ರಿಜಿಸ್ಟರು;

(ಜಿ) "ನೋಂದಾಯಿತ ಪಶು ವೈದ್ಯಕೀಯ ವೃತ್ತಿಗಾರ" ಎಂದರೆ ಯಾರ ಹೆಸರನ್ನು ರಿಜಿಸ್ಟರಿನಲ್ಲಿ ತತ್ಕಾಲದಲ್ಲಿ ನೋಂದಾಯಿಸಲಾಗಿದೆಯೋ ಆ ವ್ಯಕ್ತಿ;

(ಹೆಚ್) "ವಿನಿಯಮ" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ವಿನಿಯಮ;

(ಐ) "ರಾಜ್ಯ ಪಶು ವೈದ್ಯಕೀಯ ಪರಿಷತ್ತು" ಎಂದರೆ 32ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ಪಶು ವೈದ್ಯಕೀಯ ಪರಿಷತ್ತು ಮತ್ತು ಅದು 33ನೇ ಪ್ರಕರಣದ ಮೇರೆಗಿನ ಒಪ್ಪಂದಕ್ಕನುಸಾರವಾಗಿ ಸ್ಥಾಪನೆಗೊಂಡ ಜಂಟಿ ರಾಜ್ಯ ಪಶು ವೈದ್ಯಕೀಯ ಪರಿಷತ್ತನ್ನು ಒಳಗೊಳ್ಳುತ್ತದೆ;

(ಜೆ) "ಪಶು ವೈದ್ಯಕೀಯ ಸಂಸ್ಥೆ" ಎಂದರೆ ಭಾರತದೊಳಗೆ ಅಥವಾ ಹೊರಗಡೆ ಪಶು ವೈದ್ಯಕೀಯ ವಿಜ್ಞಾನದಲ್ಲಿ ಮತ್ತು ಪಶು ಸಂಗೋಪನೆಯಲ್ಲಿ ಪದವಿಗಳು, ಡಿಪ್ಲೋಮಾಗಳು ಅಥವಾ ಲೈಸೆನ್ಸ್‌ಗಳನ್ನು ನೀಡುವ ಯಾವುದೇ ವಿಶ್ವವಿದ್ಯಾನಿಲಯ ಅಥವಾ ಇತರ ಸಂಸ್ಥೆ;

(ಕೆ) "ಪಶು ವೈದ್ಯಕೀಯ ಚಿಕಿತ್ಸಾ ಪದ್ಧತಿ" ಎಂದರೆ ಆಧುನಿಕ ವೈಜ್ಞಾನಿಕ ಪಶು ವೈದ್ಯಕೀಯ ಔಷಧದ ಎಲ್ಲಾ ಶಾಖೆಗಳು ಮತ್ತು ಪಶು ವೈದ್ಯಕೀಯ ಶಸ್ತ್ರ ಚಿಕಿತ್ಸೆ ಮತ್ತು ಪ್ರಸೂತಿ ವಿಜ್ಞಾನ ಒಳಗೊಳ್ಳುತ್ತದೆ;

(ಎಲ್) "ಉಪಾಧ್ಯಕ್ಷ" ಎಂದರೆ ಪರಿಷತ್ತಿನ ಉಪಾಧ್ಯಕ್ಷರು.

## ಅಧ್ಯಾಯ-II

## ಭಾರತೀಯ ಪಶು ವೈದ್ಯಕೀಯ ಪರಿಷತ್ತು

**3. ಪರಿಷತ್ತಿನ ಸ್ಥಾಪನೆ ಮತ್ತು ರಚನೆ.-** (1) ಕೇಂದ್ರ ಸರ್ಕಾರವು , ಅಧಿಸೂಚನೆಯ ಮೂಲಕ ರಾಜಪತ್ರದಲ್ಲಿ ಈ ಸಂಬಂಧದಲ್ಲಿ ಗೊತ್ತು ಮಾಡಬಹುದಾದಂಥ ದಿನಾಂಕದಿಂದ, ಭಾರತೀಯ ಪಶು ವೈದ್ಯಕೀಯ ಪರಿಷತ್ತು ಎಂದು ಕರೆಯಲಾಗುವ ಪರಿಷತ್ತನ್ನು ಸ್ಥಾಪಿಸತಕ್ಕುದು.

(2) ಪರಿಷತ್ತು ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕುದು ಮತ್ತು ಅದು ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ ಆರ್ಜಿಸುವ ಮತ್ತು ವಿಲೆ ಮಾಡುವ ಅಧಿಕಾರ ಮತ್ತು ಕರಾರನ್ನು ಮಾಡಿಕೊಳ್ಳುವ ಅಧಿಕಾರದೊಂದಿಗೆ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಒಂದು ಸಾಮಾನ್ಯ ಮೊಹರನ್ನು ಹೊಂದಿರತಕ್ಕುದು ಮತ್ತು ಅದು ಸದರಿ ಹೆಸರಿನಿಂದ ದಾವೆ ಹೂಡತಕ್ಕುದು ಅಥವಾ ದಾವೆಗೆ ಗುರಿಯಾಗತಕ್ಕುದು.

(3) ಪರಿಷತ್ತು ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿರತಕ್ಕುದು, ಎಂದರೆ:-

(ಎ) ಕೇಂದ್ರ ಸರ್ಕಾರವು , ಈ ಅಧಿನಿಯಮವು ವ್ಯಾಪ್ತವಾಗುವಂಥ ರಾಜ್ಯಗಳ ಪಶುಸಂಗೋಪನ ನಿರ್ದೇಶಕರುಗಳ ಪೈಕಿ (ಯಾವುದೇ ಹೆಸರಿನಿಂದ ಕರೆಯಲಿ) ಐವರು ಸದಸ್ಯರುಗಳನ್ನು ನಾಮ ನಿರ್ದೇಶನ ಮಾಡಬಹುದು;

(ಬಿ) ಕೇಂದ್ರ ಸರ್ಕಾರವು, ಈ ಅಧಿನಿಯಮವು ವ್ಯಾಪ್ತವಾಗುವಂಥ ರಾಜ್ಯಗಳಲ್ಲಿನ ಪಶು ವೈದ್ಯಕೀಯ ಸಂಸ್ಥೆಗಳ ಮುಖ್ಯಸ್ಥರ ಪೈಕಿ ನಾಲ್ವರು ಸದಸ್ಯರನ್ನು ನಾಮನಿರ್ದೇಶನ ಮಾಡಬೇಕು;

(ಸಿ) ಭಾರತೀಯ ಕೃಷಿ ಸಂಶೋಧನೆಯ ಪರಿಷತ್ತು ಒಬ್ಬ ಸದಸ್ಯನನ್ನು ನಾಮನಿರ್ದೇಶನ ಮಾಡಬೇಕು;

(ಡಿ) ಭಾರತ ಸರ್ಕಾರದ ಪಶು ಸಂಗೋಪನಾ ಆಯುಕ್ತ, ಪದನಿಮಿತ್ತ;

(ಇ) ಪಶು ಸಂಗೋಪನಾ ವಿಭಾಗವನ್ನು ನೋಡಿಕೊಳ್ಳುವ ಕೇಂದ್ರ ಸರ್ಕಾರದ ಸಚಿವಾಲಯವನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ಒಬ್ಬ ಸದಸ್ಯನನ್ನು ನಾಮನಿರ್ದೇಶನ ಮಾಡಬೇಕು;

(ಎಫ್) ಭಾರತೀಯ ಪಶು ವೈದ್ಯಕೀಯ ಸಂಘದಿಂದ ಒಬ್ಬ ಸದಸ್ಯನನ್ನು ನಾಮನಿರ್ದೇಶನ ಮಾಡಬೇಕು;

(ಜಿ) ಭಾರತೀಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರಿನಲ್ಲಿ ನೋಂದಾಯಿಸಲಾದ ವ್ಯಕ್ತಿಗಳು ತಮ್ಮ ಪೈಕಿ ಹನ್ನೊಂದು ಸದಸ್ಯರನ್ನು ಚುನಾಯಿಸಬೇಕು;

(ಹೆಚ್) ಕೇಂದ್ರ ಸರ್ಕಾರವು, ಈ ಅಧಿನಿಯಮವು ವ್ಯಾಪ್ತವಾಗುವ ರಾಜ್ಯಗಳ ಪಶು ವೈದ್ಯಕೀಯ ಪರಿಷತ್ತುಗಳ ಅಧ್ಯಕ್ಷರ ಪೈಕಿ ಒಬ್ಬ ಸದಸ್ಯನನ್ನು ನಾಮನಿರ್ದೇಶನ ಮಾಡಬೇಕು;

(ಐ) ಕೇಂದ್ರ ಸರ್ಕಾರವು ಈ ಅಧಿನಿಯಮವು ವ್ಯಾಪ್ತವಾಗುವ ರಾಜ್ಯಗಳ ಪಶು ವೈದ್ಯಕೀಯ ಸಂಘಗಳ ಅಧ್ಯಕ್ಷರ ಪೈಕಿ ಒಬ್ಬ ಸದಸ್ಯನನ್ನು ನಾಮನಿರ್ದೇಶನ ಮಾಡಬೇಕು;

(ಜೆ) ಭಾರತೀಯ ಪಶು ವೈದ್ಯಕೀಯ ಪರಿಷತ್ತಿನ ಕಾರ್ಯದರ್ಶಿ, ಪದನಿಮಿತ್ತ;

(4) ಸದಸ್ಯರು, ವಿನಿಯಮಗಳ ಮೂಲಕ ಉಪಬಂಧಿಸಲಾದಂಥ ರೀತಿಯಲ್ಲಿ ತಮ್ಮ ಪೈಕಿ ಅಧ್ಯಕ್ಷನನ್ನು ಮತ್ತು ಉಪಾಧ್ಯಕ್ಷನನ್ನು ಆಯ್ಕೆ ಮಾಡತಕ್ಕುದು.

(5) ಅಧ್ಯಕ್ಷನ ಪದವು ತೆರವಾದಾಗಲೆಲ್ಲ, ಉಪಾಧ್ಯಕ್ಷನು ಅಧ್ಯಕ್ಷನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕುದು.

(6) ಸದಸ್ಯರೆಂದು ನಾಮನಿರ್ದೇಶಿತರಾದ ಅಥವಾ ಆಯ್ಕೆಯಾದ ವ್ಯಕ್ತಿಗಳ ಹೆಸರುಗಳನ್ನು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚಿಸತಕ್ಕುದು.

(7) ಯಾರೇ ವ್ಯಕ್ತಿಯು, ಮನ್ನಣೆ ಪಡೆದ ಪಶು ವೈದ್ಯಕೀಯ ವಿದ್ಯಾರ್ಹತೆಯನ್ನು ಹೊಂದಿದ್ದ ಹೊರತು ಪರಿಷತ್ತಿಗೆ ನಾಮ ನಿರ್ದೇಶನಗೊಳ್ಳಲು ಅಥವಾ ಆಯ್ಕೆಯಾಗಲು ಅರ್ಹನಾಗತಕ್ಕುದಲ್ಲ.

**4. ಸದಸ್ಯರ ಚುನಾವಣೆ ವಿಧಾನ.**- (1) 3ನೇ ಪ್ರಕರಣದ (3)ನೇ ಉಪಪ್ರಕರಣದ (ಜಿ) ಖಂಡದ ಮೇರೆಗಿನ ಚುನಾವಣೆಯನ್ನು, ಕೇಂದ್ರ ಸರ್ಕಾರವು ಈ ಸಂಬಂಧದಲ್ಲಿ ಅದು ರಚಿಸಬಹುದಾದಂಥ ನಿಯಮಗಳಿಗನುಸಾರವಾಗಿ ನಡೆಸತಕ್ಕುದು ಮತ್ತು ಹಾಗೆ ರಚಿಸಲಾದ ಯಾವುದೇ ನಿಯಮವು, ಭಾರತೀಯ ವೈದ್ಯಕೀಯ ವೃತ್ತಿಗಾರ ರಿಜಿಸ್ಟರು ತಯಾರಾಗುವವರೆಗೆ ಆ ಖಂಡದಲ್ಲಿ ಉಲ್ಲೇಖಿಸಲಾದ ಸದಸ್ಯರುಗಳನ್ನು ಚುನಾಯಿಸುವುದಕ್ಕೆ ಬದಲಾಗಿ ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬಹುದೆಂದು ಉಪಬಂಧಿಸಬಹುದು.

(2) ಪರಿಷತ್ತಿನ ಯಾವುದೇ ಚುನಾವಣೆಯ ಸಂಬಂಧವಾಗಿ ಯಾವುದೇ ವಿವಾದ ಉಂಟಾದರೆ, ಅದನ್ನು ತೀರ್ಮಾನಕ್ಕಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕುದು ಮತ್ತು ಅದರ ತೀರ್ಮಾನವೇ ಅಂತಿಮವಾಗಿರತಕ್ಕುದು.

**5. ಅಧ್ಯಕ್ಷ ಉಪಾಧ್ಯಕ್ಷ ಮತ್ತು ಸದಸ್ಯರ ಪದಾವಧಿ.**- (1) ಅಧ್ಯಕ್ಷನು ಅಥವಾ ಉಪಾಧ್ಯಕ್ಷನು ಮೂರು ವರ್ಷಗಳಿಗೆ ಮೀರದ ಅವಧಿಯವರೆಗೆ ಪದಧಾರಣ ಮಾಡತಕ್ಕುದು. ಆದರೆ ಸದಸ್ಯತ್ವದ ಅವಧಿಯು ಮುಕ್ತಾಯವಾದ ತರುವಾಯ ಆ ಪದದಲ್ಲಿ ಮುಂದುವರಿಯತಕ್ಕುದಲ್ಲ.

(2) ಈ ಪ್ರಕರಣದ ಉಪಬಂಧಗಳಿಗೊಳಪಟ್ಟು, ಪದನಿಮಿತ್ತ ಸದಸ್ಯರ ಹೊರತಾಗಿ ಯಾರೇ ಇತರ ಸದಸ್ಯನು, ಪರಿಷತ್ತಿಗೆ ಅವನು ಚುನಾಯಿತನಾದ ಅಥವಾ ನಾಮನಿರ್ದೇಶನಗೊಂಡ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಅಥವಾ ಅವನ ಉತ್ತರಾಧಿಕಾರಿಯು ಚುನಾಯಿತನಾಗುವವರೆಗೆ ಅಥವಾ ನಾಮನಿರ್ದೇಶನವಾಗುವವರೆಗೆ ಇವೆರಡರಲ್ಲಿ ಯಾವುದು ದೀರ್ಘವಾದುದೋ ಆ ಅವಧಿವರೆಗೆ ಪದಧಾರಣ ಮಾಡತಕ್ಕುದು.

(3) ಪರಿಷತ್ತಿನ ಸದಸ್ಯರು ಪುನರ್ ನಾಮನಿರ್ದೇಶನಕ್ಕೆ ಅಥವಾ ಮರು ಚುನಾವಣೆಗೆ ಅರ್ಹರಾಗಿರತಕ್ಕುದು.

(4) ಯಾರೇ ಸದಸ್ಯನ ಮೂರು ವರ್ಷಗಳ ಅವಧಿಯು ಮುಕ್ತಾಯಗೊಳ್ಳಲಿರುವಾಗ ಸದರಿ ಅವಧಿ ಮುಕ್ತಾಯವಾಗುವುದಕ್ಕೆ ಮೂರು ತಿಂಗಳ ಮುಂಚೆ ಯಾವುದೇ ಕಾಲದಲ್ಲಿ ಅವನ ಉತ್ತರಾಧಿಕಾರಿಯನ್ನು ನಾಮನಿರ್ದೇಶನ ಮಾಡಬಹುದು ಅಥವಾ ಚುನಾಯಿಸಬಹುದು. ಆದರೆ ಸದರಿ ಅವಧಿಯು ಮುಕ್ತಾಯಗೊಳ್ಳುವುದಕ್ಕೆ ಮುಂಚೆ ತನ್ನ ಪದಧಾರಣ ಮಾಡತಕ್ಕುದಲ್ಲ.

**6. ಸದಸ್ಯತ್ವ ಕೊನೆಗೊಳ್ಳುವುದು.**– (1) ಯಾರೇ ಸದಸ್ಯನು ಕೆಳಕಂಡ ಸಂದರ್ಭದಲ್ಲಿ, ಎಂದರೆ,–

(ಎ) ಪರಿಷತ್ತಿನ ಅಭಿಪ್ರಾಯದಲ್ಲಿ ಸಾಕಷ್ಟು ಕಾರಣವಿಲ್ಲದೆ, ಪರಿಷತ್ತಿನ ಸತತ ಮೂರು ಸಭೆಗಳಿಗೆ ಗೈರು ಹಾಜರಾದರೆ;

(ಬಿ) ಅವನನ್ನು ಯಾವ ಪದದಿಂದ ನಾಮನಿರ್ದೇಶನ ಮಾಡಲಾಗಿದೆಯೋ ಆ ಪದವನ್ನು ಅವನು ಧಾರಣ ಮಾಡಿರುವುದು ನಿಂತು ಹೋದರೆ;

(ಸಿ) 3ನೇ ಪ್ರಕರಣದ (3)ನೇ ಉಪಪ್ರಕರಣದ (ಜಿ) ಖಂಡದ ಮೇರೆಗೆ ಚುನಾಯಿತನಾದ ಸದಸ್ಯನ ಸಂದರ್ಭದಲ್ಲಿ, ಅವನು ರಿಜಿಸ್ಟರಿನಲ್ಲಿ ನೋಂದಾಯಿತ ವ್ಯಕ್ತಿಯಾಗಿರುವುದು ಕೊನೆಗೊಂಡರೆ;

(ಡಿ) ನೈತಿಕ ಅಧಃಪತನವನ್ನೊಳಗೊಂಡ ಮತ್ತು ಕಾರಾವಾಸ ಶಿಕ್ಷೆಯಿಂದ ದಂಡನೀಯವಾಗುವ ಅಪರಾಧದ ಅಪರಾಧಿಯೆಂದು ನಿರ್ಣೀತನಾದರೆ;

(ಇ) ಅವಿಮುಕ್ತ ದಿವಾಳಿಯಾದರೆ;

(ಎಫ್) ಅಸ್ವಸ್ಥಚಿತ್ತನಾದರೆ ಮತ್ತು ಸಕ್ಷಮ ನ್ಯಾಯಾಲಯವು ಹಾಗೆಂದು ಘೋಷಿಸಿದ್ದರೆ

– ಅವನು ತನ್ನ ಪದವನ್ನು ತೆರವು ಮಾಡಿರುವುದಾಗಿ ಭಾವಿಸತಕ್ಕುದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಸ್ಥಾನವು ತೆರವಾದಾಗ ಅಧ್ಯಕ್ಷನು ಕೇಂದ್ರ ಸರ್ಕಾರಕ್ಕೆ ಹಾಗೆ ಸ್ಥಾನವು ತೆರವಾದ ಸಂಗತಿಯನ್ನು ಆ ಕೂಡಲೇ ವರದಿ ಮಾಡತಕ್ಕುದು ಮತ್ತು ಆ ತರುವಾಯ ಆ ಸರ್ಕಾರವು 7ನೇ ಪ್ರಕರಣದ ಪರಂತುಕಕ್ಕೆ ಒಳಪಟ್ಟು ಹಾಗೆ ತೆರವಾದ ಸ್ಥಾನವನ್ನು ಭರ್ತಿ ಮಾಡಲು ಅಗತ್ಯ ಕ್ರಮ ಕೈಗೊಳ್ಳಬಹುದು.

**7. ಆಕಸ್ಮಿಕ ಖಾಲಿ ಸ್ಥಾನಗಳು.**– (1) ಪರಿಷತ್ತಿನಲ್ಲುಂಟಾದ ಆಕಸ್ಮಿಕ ಖಾಲಿ ಸ್ಥಾನವನ್ನು ಸಂದರ್ಭಾನುಸಾರವಾಗಿ ನಾಮನಿರ್ದೇಶನ ಅಥವಾ ಚುನಾವಣೆಯ ಮೂಲಕ ಭರ್ತಿ ಮಾಡತಕ್ಕುದು ಮತ್ತು ಖಾಲಿಸ್ಥಾನವನ್ನು ಭರ್ತಿ ಮಾಡಲು ನಾಮನಿರ್ದೇಶಿತನಾದ ಅಥವಾ ಚುನಾಯಿತನಾದ ವ್ಯಕ್ತಿಯು ಯಾವ ಸದಸ್ಯನ ಸ್ಥಾನದಲ್ಲಿ ನಾಮನಿರ್ದೇಶಿತ ಅಥವಾ ಚುನಾಯಿತನಾಗಿರುವನೋ ಆ ಸದಸ್ಯನ ಪದಾವಧಿಯ ಉಳಿದ ಅವಧಿಯವರೆಗೆ ಮಾತ್ರ ಪದಧಾರಣ ಮಾಡತಕ್ಕುದು:

ಪರಂತು, ಯಾವುದೇ ಅಂಥ ಆಕಸ್ಮಿಕ ಖಾಲಿ ಸ್ಥಾನವನ್ನು ನಾಮನಿರ್ದೇಶಿತ ಅಥವಾ ಚುನಾಯಿತನಾದ ಸದಸ್ಯನ ಸಾಮಾನ್ಯ ಪದಾವಧಿಯು ಮುಕ್ತಾಯಗೊಳ್ಳುವ ದಿನಾಂಕದಿಂದ ಮೂರು ತಿಂಗಳ ಒಳಗಾಗಿ ಭರ್ತಿ ಮಾಡುವುದು ಈ ಪ್ರಕರಣದ ಮೇರೆಗೆ ಅವಶ್ಯವಾಗಿರತಕ್ಕುದಲ್ಲ.

**8. ರಾಜೀನಾಮೆ.**– (1) ಅಧ್ಯಕ್ಷನು ಅಥವಾ ಉಪಾಧ್ಯಕ್ಷನು, ಪರಿಷತ್ತಿಗೆ ಬರೆದುಕೊಂಡ, ಕಾರ್ಯದರ್ಶಿಗೆ ಸಲ್ಲಿಸುವ, ಲಿಖಿತ ನೋಟೀಸು ಕೊಡುವ ಮೂಲಕ ಯಾವುದೇ ಕಾಲದಲ್ಲಿ ತನ್ನ ಪದಕ್ಕೆ

ರಾಜೀನಾಮೆಯನ್ನು ಕೊಡಬಹುದು ಮತ್ತು ಆ ರಾಜೀನಾಮೆಯು, ಅದನ್ನು ಪರಿಷತ್ತು ಒಪ್ಪಿಕೊಂಡ ದಿನಾಂಕ ಅಥವಾ ಕಾರ್ಯದರ್ಶಿಯು ಅದನ್ನು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿವಸಗಳು ಮುಕ್ತಾಯವಾದ ದಿನಾಂಕ ಇವುಗಳಲ್ಲಿ ಯಾವುದು ಮೊದಲೋ ಆ ದಿವಸದಿಂದ ಜಾರಿಗೆ ಬರತಕ್ಕುದು.

(2) ಯಾರೇ ಸದಸ್ಯನು ಅಧ್ಯಕ್ಷರಿಗೆ ಬರೆದ ಲಿಖಿತ ನೋಟೀಸಿನ ಮೂಲಕ ಯಾವುದೇ ಕಾಲದಲ್ಲಿ ತನ್ನ ಪದಕ್ಕೆ ರಾಜೀನಾಮೆಯನ್ನು ಕೊಡಬಹುದು ಮತ್ತು ಪ್ರತಿ ಅಂಥ ರಾಜೀನಾಮೆಯು, ಅಧ್ಯಕ್ಷನು ಅದನ್ನು ಒಪ್ಪಿಕೊಂಡ ದಿನಾಂಕ ಅಥವಾ ಅಧ್ಯಕ್ಷನು ಅದನ್ನು ಸ್ವೀಕರಿಸಿದ ದಿನದಿಂದ ತೊಂಬತ್ತು ದಿವಸಗಳು ಮುಕ್ತಾಯವಾದ ದಿನಾಂಕ ಇವೆರಡರಲ್ಲಿ ಯಾವುದು ಮೊದಲೋ ಆ ದಿನದಿಂದ ಜಾರಿಗೆ ಬರತಕ್ಕುದು.

**9. ಪರಿಷತ್ತಿನ ಸಭೆಗಳು.–** (1) ಪರಿಷತ್ತು, ವರ್ಷದಲ್ಲಿ ಕೊನೇ ಪಕ್ಷ ಎರಡು ಬಾರಿ ಪರಿಷತ್ತು ಗೊತ್ತುಪಡಿಸಬಹುದಾದಂಥ ಕಾಲ ಮತ್ತು ಸ್ಥಳದಲ್ಲಿ ಸಭೆ ಸೇರತಕ್ಕುದು.

(2) ಪರಿಷತ್ತಿನ ಯಾವುದೇ ಸಭೆಯಲ್ಲಿ ಕಾರ್ಯಕಲಾಪದ ನಿರ್ವಹಣೆಗೆ ಅವಶ್ಯಕವಾದ ಕೋರಂ ಒಂಬತ್ತು ಆಗಿರತಕ್ಕುದು.

(3) ಅಧ್ಯಕ್ಷನು ಹಾಜರಿರುವಾಗ ಪರಿಷತ್ತಿನ ಪ್ರತಿಯೊಂದು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕುದು ಮತ್ತು ಅವರ ಗೈರುಹಾಜರಿಯಲ್ಲಿ, ಉಪಾಧ್ಯಕ್ಷನು ಮತ್ತು ಆ ಇಬ್ಬರೂ ಗೈರುಹಾಜರಿರುವಾಗ ಹಾಜರಿರುವ ಸದಸ್ಯರು ತಮ್ಮ ಪೈಕಿ ಆಯ್ಕೆಯಾದ ಯಾರೇ ಇತರ ಸದಸ್ಯನು ಅಂಥ ಸಭೆಯ ಅಧ್ಯಕ್ಷತೆ ವಹಿಸತಕ್ಕುದು.

(4) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಉಪಬಂಧಿಸುವ ಹೊರತು ಪರಿಷತ್ತಿನ ಯಾವುದೇ ಸಭೆಯ ಮುಂದೆ ಬರುವ ಎಲ್ಲಾ ವಿಷಯಗಳು, ಹಾಜರಿದ್ದು ಮತ ನೀಡುವ ಸದಸ್ಯರ ಬಹುಮತದ ಮೂಲಕ ತೀರ್ಮಾನವಾಗತಕ್ಕುದು.

(5) ಮತಗಳು ಸಮವಾಗಿರುವ ಸಂದರ್ಭದಲ್ಲಿ ಅಧ್ಯಕ್ಷರು ನಿರ್ಣಾಯಕ ಮತ ಹೊಂದಿರತಕ್ಕುದು.

(6) (1) ರಿಂದ (5) ರವರೆಗಿನ ಉಪಪ್ರಕರಣಗಳ ಉಪಬಂಧಗಳಿಗೊಳಪಟ್ಟು, ಪರಿಷತ್ತು, ತನ್ನ ಸಭೆಗಳಲ್ಲಿನ ಕಾರ್ಯಕಲಾಪದ ನಿರ್ವಹಣೆಗೆ ಸಂಬಂಧಪಟ್ಟಂತೆ ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ಪ್ರಕ್ರಿಯಾ ನಿಯಮಗಳನ್ನು ಅನುಸರಿಸತಕ್ಕುದು.

**10. ಪರಿಷತ್ತಿನಲ್ಲಿನ ಖಾಲಿ ಸ್ಥಾನಗಳು ಕಾರ್ಯಗಳನ್ನು ಅಸಿಂಧುಗೊಳಿಸದಿರುವುದು, ಇತ್ಯಾದಿ.–** ಪರಿಷತ್ತಿನ ಯಾವುದೇ ಕಾರ್ಯವು ಅಥವಾ ವ್ಯವಹರಣೆಯು ಪರಿಷತ್ತಿನಲ್ಲಿ ಸ್ಥಾನವು ಖಾಲಿ ಇರುವ ಕಾರಣ ಮಾತ್ರದಿಂದಲೇ ಅಥವಾ ಅದರ ರಚನೆಯಲ್ಲಿನ ಯಾವುದೇ ದೋಷದ ಅಥವಾ ಸಕ್ರಮವಲ್ಲದ ಕಾರಣ ಮಾತ್ರದಿಂದಲೆ ಅಸಿಂಧುವಾಗತಕ್ಕುದಲ್ಲ.

**11. ಕಾರ್ಯದರ್ಶಿಯ ಮತ್ತು ಇತರ ಅಧಿಕಾರಿಗಳ ಅಥವಾ ನೌಕರರ ನೇಮಕಾತಿ.–** (1) ಪರಿಷತ್ತು, ಕೇಂದ್ರ ಸರ್ಕಾರದ ಪೂರ್ವಾನುಮತಿಯೊಂದಿಗೆ ಕಾರ್ಯದರ್ಶಿಯನ್ನು ನೇಮಕ ಮಾಡಬಹುದು, (ಅಂಥ ಕಾರ್ಯದರ್ಶಿಯು, ಪರಿಷತ್ತು ಯಾವುದೇ ಇತರ ವ್ಯಕ್ತಿಯನ್ನು ಖಜಾಂಚಿಯಾಗಿ ನೇಮಿಸಿದ ಹೊರತು ಖಜಾಂಚಿಯಾಗಿ ಸಹ ಕಾರ್ಯ ನಿರ್ವಹಿಸತಕ್ಕುದು) ಮತ್ತು ಈ ಅಧಿನಿಯಮದ ಉದ್ದೇಶಗಳನ್ನು ಜಾರಿಗೊಳಿಸಲು ಅವಶ್ಯವೆಂದು ತಾನು ಭಾವಿಸುವಂಥ ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ನೇಮಕ ಮಾಡಬಹುದು.

(2) ಪರಿಷತ್ತು ನೇಮಕ ಮಾಡುವ ಕಾರ್ಯದರ್ಶಿಯ, ಇತರ ಅಧಿಕಾರಿಗಳ ಮತ್ತು ನೌಕರರ ಸೇವಾ ಷರತ್ತುಗಳು ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂತೆ ಇರತಕ್ಕುದು.

(3) ಪರಿಷತ್ತಿನ ಕಾರ್ಯದರ್ಶಿ, ಅಧಿಕಾರಿಗಳು ಮತ್ತು ಇತರ ನೌಕರರು ಭಾರತ ದಂಡ ಸಂಹಿತೆ, 1860ರ ( 1860ರ 45) 21ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಲೋಕ ನೌಕರರೆಂದು ಭಾವಿಸತಕ್ಕುದು.

(4) ಪರಿಷತ್ತಿನ ಎಲ್ಲಾ ಆದೇಶಗಳನ್ನು ಮತ್ತು ತೀರ್ಮಾನಗಳನ್ನು ಮತ್ತು ಇತರ ಲಿಖಿತಗಳನ್ನು ಕಾರ್ಯದರ್ಶಿಯ ಅಥವಾ ಈ ಸಂಬಂಧದಲ್ಲಿ ಅಧಿಕೃತನಾದ ಪರಿಷತ್ತಿನ ಯಾರೇ ಇತರ ಅಧಿಕಾರಿಯ ಸಹಿ ಮೂಲಕ ಅಧಿಪ್ರಮಾಣನಗೊಳಿಸತಕ್ಕುದು.

**12. ಕಾರ್ಯ ನಿರ್ವಾಹಕ ಸಮಿತಿಗಳು ಮತ್ತು ಇತರ ಸಮಿತಿಗಳು.**- (1) ಪರಿಷತ್ತು ತನ್ನ ಸದಸ್ಯರ ಪೈಕಿ ಒಂದು ಕಾರ್ಯ ನಿರ್ವಾಹಕ ಸಮಿತಿಯನ್ನು ನೇಮಿಸತಕ್ಕುದು ಮತ್ತು ಪರಿಷತ್ತು ಅವಶ್ಯವೆಂದು ಪರಿಗಣಿಸುವಂಥ ಸಾಮಾನ್ಯ ಅಥವಾ ನಿರ್ದಿಷ್ಟ ಉದ್ದೇಶಗಳಿಗಾಗಿ ಇತರ ಸಮಿತಿಗಳನ್ನು ರಚಿಸಬಹುದು ಮತ್ತು ಕಾರ್ಯನಿರ್ವಾಹಕ ಸಮಿತಿಯ ಹೊರತಾದ ಇತರ ಯಾವುದೇ ಸಮಿತಿಗೆ ಯಾವುದೇ ವಿಷಯದ ಮೇಲೆ ಸಲಹೆ ಮಾಡಲು ವಿಶೇಷ ಅರ್ಹತೆ ಪಡೆದಿರುವ ಯಾರೇ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳನ್ನು ಸಹ ಸದಸ್ಯರನ್ನಾಗಿ ಸೇರಿಸಿಕೊಳ್ಳಬಹುದು.

(2) ಈ ಪ್ರಕರಣದ ಮೇರೆಗೆ ರಚಿತವಾದ ಸಮಿತಿಯು ಅದರ ಸಭೆಗಳ ಕಾರ್ಯಕಲಾಪ ನಿರ್ವಹಣೆಗೆ ಸಂಬಂಧಿಸಿದಂತೆ ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ವೇಳೆ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕುದು ಮತ್ತು ಅಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕುದು.

**13. ಫೀಜುಗಳು ಮತ್ತು ಭತ್ಯೆಗಳು.**- ಅಧ್ಯಕ್ಷರಿಗೆ ಮತ್ತು ಇತರ ಸದಸ್ಯರಿಗೆ ಮತ್ತು ( ಪರಿಷತ್ತಿನ ಸದಸ್ಯರ ಹೊರತಾಗಿ ಇತರ) ಸಮಿತಿಗಳ ಸದಸ್ಯರುಗಳಿಗೆ ಪರಿಷತ್ತಿನ ಸಮಿತಿಗಳ ಸಭೆಗಳಲ್ಲಿ ಹಾಜರಾಗುವ ಬಗ್ಗೆ ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ಫೀಜುಗಳನ್ನು ಮತ್ತು ಭತ್ಯೆಗಳನ್ನು ಸಂದಾಯ ಮಾಡತಕ್ಕುದು.

**14. ಪರಿಷತ್ತು ಒದಗಿಸಬೇಕಾದ ಮಾಹಿತಿ ಮತ್ತು ಅದರ ಪ್ರಕಟಣೆ.**- (1) ಪರಿಷತ್ತು, ಕೇಂದ್ರ ಸರ್ಕಾರವು ಅಗತ್ಯಪಡಿಸಬಹುದಾದಂಥ ವರದಿಗಳನ್ನು, ಟಿಪ್ಪಣಿಗಳ ಪ್ರತಿಗಳನ್ನು, ಲೆಕ್ಕಪತ್ರಗಳ ಸಾರಾಂಶವನ್ನು ಮತ್ತು ಇತರ ಮಾಹಿತಿಯನ್ನು ಆ ಸರ್ಕಾರಕ್ಕೆ ಸಲ್ಲಿಸತಕ್ಕುದು.

(2) ಕೇಂದ್ರ ಸರ್ಕಾರವು, ಈ ಪ್ರಕರಣದ ಮೇರೆಗೆ ತನಗೆ ಸಲ್ಲಿಸಲಾದ ಯಾವುದೇ ವರದಿಯನ್ನು, ಪ್ರತಿಯನ್ನು, ಸಾರಾಂಶವನ್ನು ಅಥವಾ ಇತರ ಮಾಹಿತಿಯನ್ನು ತಾನು ಯುಕ್ತವೆಂದು ಯೋಚಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸಬಹುದು.

**15. ಭಾರತದಲ್ಲಿನ ಪಶು ವೈದ್ಯಕೀಯ ಸಂಸ್ಥೆಗಳು ನೀಡಿದ ಪಶು ವೈದ್ಯಕೀಯ ವಿದ್ಯಾರ್ಹತೆಗಳಿಗೆ ಮನ್ನಣೆ ನೀಡುವುದು.**- (1) ಭಾರತದಲ್ಲಿನ ಯಾವುದೇ ಪಶು ವೈದ್ಯಕೀಯ ಸಂಸ್ಥೆಯು ನೀಡಿದ ಮತ್ತು ಮೊದಲನೇ ಅನುಸೂಚಿಯಲ್ಲಿ ಸೇರ್ಪಡೆಯಾಗಿರುವ ಪಶು ವೈದ್ಯಕೀಯ ವಿದ್ಯಾರ್ಹತೆಗಳಿಗೆ ಈ ಅಧಿನಿಯಮದ ಉದ್ದೇಶಗಳಿಗಾಗಿ ಪಶು ವೈದ್ಯಕೀಯ ವಿದ್ಯಾರ್ಹತೆಗಳೆಂದು ಮನ್ನಣೆ ನೀಡತಕ್ಕುದು.

(2) ಭಾರತದಲ್ಲಿನ ಯಾವುದೇ ಪಶು ವೈದ್ಯಕೀಯ ಸಂಸ್ಥೆ ನೀಡುವ ವಿದ್ಯಾರ್ಹತೆಗಳು ಮೊದಲನೇ ಅನುಸೂಚಿಯಲ್ಲಿ ಸೇರ್ಪಡೆಯಾಗಿಲ್ಲದ ವಿದ್ಯಾರ್ಹತೆಯಾಗಿದ್ದರೆ, ಅಂಥ ವಿದ್ಯಾರ್ಹತೆಗಳಿಗೆ ಮನ್ನಣೆ ನೀಡಬೇಕೆಂದು ಕೋರಿ ಆ ಸಂಸ್ಥೆಯು ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಬಹುದು ಮತ್ತು ಕೇಂದ್ರ ಸರ್ಕಾರವು ಪರಿಷತ್ತಿನೊಂದಿಗೆ ಸಮಾಲೋಚಿಸಿದ ತರುವಾಯ ರಾಜಪತ್ರದಲ್ಲಿ ಅಧಿಸೂಚನೆ ಹೊರಡಿಸಿ ಮೊದಲನೇ ಅನುಸೂಚಿಯಲ್ಲಿ ಆ ವಿದ್ಯಾರ್ಹತೆ ಸೇರುವಂತೆ ಅದನ್ನು ತಿದ್ದುಪಡಿ ಮಾಡಬಹುದು ಮತ್ತು ಯಾವುದೇ ಅಂಥ ಅಧಿಸೂಚನೆಯಲ್ಲಿ, ಆ ಪಶು ವೈದ್ಯಕೀಯ ವಿದ್ಯಾರ್ಹತೆಯು ನಿರ್ದಿಷ್ಟಪಡಿಸಿದ ದಿನಾಂಕದ ತರುವಾಯ ಅದನ್ನು ನೀಡಿದ್ದರೆ ಮಾತ್ರವೇ ಮನ್ನಣೆ ಪಡೆದ ವಿದ್ಯಾರ್ಹತೆಯಾಗುತ್ತದೆ ಎಂದು ಘೋಷಿಸಿ ಅಂಥ ಪಶು ವೈದ್ಯಕೀಯ ವಿದ್ಯಾರ್ಹತೆಯ ಎದುರಿಗೆ ಮೊದಲನೇ ಅನುಸೂಚಿಯ ಕೊನೆ ಅಂಕಣದಲ್ಲಿ ಒಂದು ನಮೂದನ್ನು ಮಾಡತಕ್ಕುದೆಂದು ಸಹ ನಿರ್ದೇಶಿಸಬಹುದು.

**16. ಪರಸ್ಪರ ಮನ್ನಣೆ ನೀಡಿಕೆ ವ್ಯವಸ್ಥೆಯುಳ್ಳ ದೇಶಗಳಲ್ಲಿನ ಪಶು ವೈದ್ಯಕೀಯ ಸಂಸ್ಥೆಗಳು ನೀಡುವ ಪಶು ವೈದ್ಯಕೀಯ ವಿದ್ಯಾರ್ಹತೆಗಳಿಗೆ ಮನ್ನಣೆ ನೀಡುವುದು.**- (1) ಎರಡನೇ ಅನುಸೂಚಿಯಲ್ಲಿ ಸೇರಿಸಲಾಗಿರುವ, ಭಾರತದ ಹೊರಗಡೆಯ ಪಶು ವೈದ್ಯಕೀಯ ಸಂಸ್ಥೆಗಳು ನೀಡುವ ಪಶು ವೈದ್ಯಕೀಯ

ವಿದ್ಯಾರ್ಹತೆಗಳಿಗೆ ಈ ಅಧಿನಿಯಮದ ಉದ್ದೇಶಗಳಿಗಾಗಿ ಪಶು ವೈದ್ಯಕೀಯ ವಿದ್ಯಾರ್ಹತೆ ಎಂದು ಮನ್ನಣೆ ನೀಡತಕ್ಕುದು.

(2) ಪರಿಷತ್ತು, ಭಾರತದ ಹೊರಗಡೆ ಇರುವ ಯಾವುದೇ ದೇಶದಲ್ಲಿ ಆ ದೇಶದ ಕಾನೂನಿನ ಮೂಲಕ ಪಶು ವೈದ್ಯಕೀಯ ವೃತ್ತಿಗಾರ ರಿಜಿಸ್ಟರನ್ನು ನಿರ್ವಹಿಸುವ ಹೊಣೆ ಹೊಂದಿರುವ ಪ್ರಾಧಿಕಾರದ ಜೊತೆ ಪಶು ವೈದ್ಯಕೀಯ ವಿದ್ಯಾರ್ಹತೆಗಳಿಗೆ ಮನ್ನಣೆ ನೀಡುವ ಬಗ್ಗೆ ಪರಸ್ಪರ ಮನ್ನಣೆ ನೀಡಿಕೆ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವ ಬಗ್ಗೆ ಸಮಾಲೋಚಿಸಬಹುದು ಮತ್ತು ಯಾವುದೇ ಅಂಥ ವ್ಯವಸ್ಥೆಗೆ ಅನುಸಾರವಾಗಿ, ಕೇಂದ್ರ ಸರ್ಕಾರವು ರಾಜ ಪತ್ರದಲ್ಲಿ ಅಧಿಸೂಚನೆ ಹೊರಡಿಸಿ ಪರಿಷತ್ತು ಮನ್ನಣೆ ನೀಡಬೇಕೆಂದು ತೀರ್ಮಾನಿಸಿರುವಂಥ ಪಶು ವೈದ್ಯಕೀಯ ವಿದ್ಯಾರ್ಹತೆಯು ಎರಡನೇ ಅನುಸೂಚಿಯಲ್ಲಿ ಸೇರ್ಪಡೆಯಾಗುವ ಹಾಗೆ ಅದನ್ನು ತಿದ್ದುಪಡಿ ಮಾಡಬಹುದು ಮತ್ತು ಯಾವುದೇ ಅಂಥ ಅಧಿಸೂಚನೆಯಲ್ಲಿ ಆ ಪಶು ವೈದ್ಯಕೀಯ ವಿದ್ಯಾರ್ಹತೆಯು, ನಿರ್ದಿಷ್ಟಪಡಿಸಿದ ದಿನಾಂಕದ ತರುವಾಯ ಅದನ್ನು ನೀಡಿದ್ದರೆ ಅದು ಮನ್ನಣೆ ಪಡೆದ ಪಶು ವೈದ್ಯಕೀಯ ವಿದ್ಯಾರ್ಹತೆಯಾಗತಕ್ಕುದೆಂದು ಘೋಷಿಸಿದ್ದರೆ ಮಾತ್ರವೇ ಅಂಥ ವಿದ್ಯಾರ್ಹತೆಯ ಎದುರಿಗೆ ಎರಡನೇ ಅನುಸೂಚಿಯ ಕೊನೆಯ ಅಂಕಣದಲ್ಲಿ ನಮೂದನ್ನು ಮಾಡತಕ್ಕುದೆಂದು ಸಹ ನಿರ್ದೇಶಿಸಬಹುದು.

(3) ಕೇಂದ್ರ ಸರ್ಕಾರವು, ಪರಿಷತ್ತಿನೊಂದಿಗೆ ಸಮಾಲೋಚಿಸಿದ ತರುವಾಯ, ರಾಜಪತ್ರದಲ್ಲಿ ಅಧಿಸೂಚನೆ ಹೊರಡಿಸಿ, ಯಾವುದೇ ಪಶು ವೈದ್ಯಕೀಯ ವಿದ್ಯಾರ್ಹತೆಯು, ನಿರ್ದಿಷ್ಟ ದಿನಾಂಕಕ್ಕೆ ಮೊದಲು ಅದನ್ನು ನೀಡಿದ್ದರೆ ಅದು ಮನ್ನಣೆ ಪಡೆದ ಪಶು ವೈದ್ಯಕೀಯ ವಿದ್ಯಾರ್ಹತೆಯಾಗತಕ್ಕುದೆಂದು ಘೋಷಿಸಿದ್ದರೆ ಮಾತ್ರವೇ ಅದಕ್ಕೆ ಸಂಬಂಧಪಟ್ಟಂತೆ ಎರಡನೇ ಅನುಸೂಚಿಯಲ್ಲಿ ನಮೂದು ಮಾಡಬೇಕೆಂದು ನಿರ್ದೇಶಿಸಿ ಅದನ್ನು ತಿದ್ದುಪಡಿ ಮಾಡಬಹುದು.

(4) ಪರಿಷತ್ತು, (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಪ್ರಾಧಿಕಾರದ ಮನ್ನಣೆಗಾಗಿ ಪ್ರಸ್ತಾಪಿಸಲಾದ ಯಾವುದೇ ಪಶು ವೈದ್ಯಕೀಯ ವಿದ್ಯಾರ್ಹತೆಯ ಬಗ್ಗೆ ಶಿಫಾರಸು ಮಾಡಲು ನಿರಾಕರಿಸಿದರೆ ಮತ್ತು ಆ ಪ್ರಾಧಿಕಾರವು ಈ ಸಂಬಂಧದಲ್ಲಿ ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದರೆ ಕೇಂದ್ರ ಸರ್ಕಾರವು ಅಂಥ ಅರ್ಜಿಯ ಪರಿಶೀಲನೆಯ ತರುವಾಯ ಮತ್ತು ಅಂಥ ಯಾವುದೇ ನಿರಾಕರಣೆಗೆ ಕಾರಣವೇನಾದರೂ ಇದ್ದರೆ, ಆ ಕುರಿತ ವರದಿಯನ್ನು ಪರಿಷತ್ತಿನಿಂದ ಪಡೆದುಕೊಂಡ ತರುವಾಯ ರಾಜಪತ್ರದಲ್ಲಿ ಅಧಿಸೂಚನೆ ಹೊರಡಿಸಿ ಎರಡನೇ ಅನುಸೂಚಿಯಲ್ಲಿ ಅಂಥ ವಿದ್ಯಾರ್ಹತೆಯು ಸೇರ್ಪಡೆಯಾಗುವ ಹಾಗೆ ಅದನ್ನು ತಿದ್ದುಪಡಿ ಮಾಡಬಹುದು ಮತ್ತು (2)ನೇ ಉಪಪ್ರಕರಣದ ಉಪಬಂಧಗಳು ಅಂಥ ಅಧಿಸೂಚನೆಗೆ ಅನ್ವಯವಾಗತಕ್ಕುದು.

**17. ಪರಸ್ಪರ ಮನ್ನಣೆ ನೀಡಿಕೆ ವ್ಯವಸ್ಥೆಯಿಲ್ಲದಂಥ ದೇಶಗಳಲ್ಲಿನ ಪಶು ವೈದ್ಯಕೀಯ ಸಂಸ್ಥೆಗಳು ನೀಡಿದ ಪಶು ವೈದ್ಯ ವಿದ್ಯಾರ್ಹತೆಗಳಿಗೆ ಮನ್ನಣೆ ನೀಡುವುದಕ್ಕಾಗಿ ಕೆಲವು ಪ್ರಕರಣಗಳಲ್ಲಿ ವಿಶೇಷ ಉಪಬಂಧಗಳು.**- (1) ಕೇಂದ್ರ ಸರ್ಕಾರವು, ಪರಿಷತ್ತಿನೊಂದಿಗೆ ಸಮಾಲೋಚಿಸಿದ ತರುವಾಯ, ರಾಜಪತ್ರದಲ್ಲಿ ಅಧಿಸೂಚನೆ ಹೊರಡಿಸಿ, ಭಾರತದ ಹೊರಗಡೆ ಇರುವಂಥ ಯಾವ ದೇಶದೊಂದಿಗೆ ಪಶು ವೈದ್ಯಕೀಯ ವಿದ್ಯಾರ್ಹತೆಗಳಿಗೆ ಮನ್ನಣೆ ನೀಡುವ ಪರಸ್ಪರ ವ್ಯವಸ್ಥೆಯು ಜಾರಿಯಲ್ಲಿಲ್ಲವೋ ಆ ಯಾವುದೇ ದೇಶದಲ್ಲಿನ ಪಶು ವೈದ್ಯಕೀಯ ಸಂಸ್ಥೆಗಳು ನೀಡಿದ ಪಶು ವೈದ್ಯಕೀಯ ವಿದ್ಯಾರ್ಹತೆಗಳು ಈ ಅಧಿನಿಯಮದ ಉದ್ದೇಶಕ್ಕಾಗಿ ಮನ್ನಣೆ ಪಡೆದ ಪಶು ವೈದ್ಯಕೀಯ ವಿದ್ಯಾರ್ಹತೆಗಳಾಗತಕ್ಕುದು ಅಥವಾ ನಿರ್ದಿಷ್ಟಪಡಿಸಿದ ದಿನಾಂಕದ ತರುವಾಯ ಅವುಗಳನ್ನು ನೀಡಿದ್ದರೆ ಮಾತ್ರವೇ ಮನ್ನಣೆ ಪಡೆದ ವಿದ್ಯಾರ್ಹತೆಯಾಗತಕ್ಕುದು ಎಂದು ನಿರ್ದೇಶಿಸಬಹುದು:

ಪರಂತು, ಅಂಥ ವಿದ್ಯಾರ್ಹತೆಗಳನ್ನು ಹೊಂದಿದ ವ್ಯಕ್ತಿಗಳು ಪಶು ವೈದ್ಯಕೀಯ ವೃತ್ತಿಯನ್ನು ನಡೆಸಬಯಸಿದರೆ, -

(ಎ) ಅಂಥ ವ್ಯಕ್ತಿಗಳು, ಪಶು ವೈದ್ಯಕೀಯ ವೃತ್ತಿಗಾರ ನೋಂದಣಿಯನ್ನು ವಿನಿಯಮಿಸಲು ಆ ದೇಶದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿಗನುಸಾರವಾಗಿ ಪಶು ವೈದ್ಯಕೀಯ ವೃತ್ತಿಗಾರರಾಗಿ ನೋಂದಾಯಿಸಿದ್ದರೆ ಮಾತ್ರ ಅವರಿಗೆ ಆ ವೃತ್ತಿಯನ್ನು ನಡೆಸಲು ಅನುಮತಿಸತಕ್ಕುದು;

(ಬಿ) ಅವರು ತತ್ಕಾಲದಲ್ಲಿ ಬೋಧನೆ, ಸಂಶೋಧನೆ, ಧರ್ಮಾರ್ಥ ಕಾರ್ಯಗಳ ಉದ್ದೇಶಕ್ಕಾಗಿ ಯಾವ ಸಂಸ್ಥೆಗೆ ಸೇರಿರುವರೋ, ಆ ಸಂಸ್ಥೆಗೆ ಮಾತ್ರ ಅವರ ವೃತ್ತಿಯು ಸೀಮಿತವಾಗಿರತಕ್ಕುದು; ಮತ್ತು

(ಸಿ) ಕೇಂದ್ರ ಸರ್ಕಾರವು ಈ ಸಂಬಂಧವಾಗಿ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದಿಷ್ಟಪಡಿಸಿದ ಅವಧಿಗೆ ಅವರ ವೃತ್ತಿಯು ಸೀಮಿತವಾಗಿರತಕ್ಕುದು.

(2) ಯಾವುದೇ ಅಂಥ ಪಶು ವೈದ್ಯಕೀಯ ವಿದ್ಯಾರ್ಹತೆಗೆ ಸಂಬಂಧಪಟ್ಟಂತೆ, ಕೇಂದ್ರ ಸರ್ಕಾರವು ಪರಿಷತ್ತಿನೊಂದಿಗೆ ಸಮಾಲೋಚಿಸಿದ ತರುವಾಯ ರಾಜಪತ್ರದಲ್ಲಿ ಅಧಿಸೂಚನೆ ಹೊರಡಿಸಿ, ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮುಂಚೆ ಅದನ್ನು ನೀಡಿದ್ದರೆ ಅದು ಮನ್ನಣೆ ಪಡೆದ ಪಶು ವೈದ್ಯಕೀಯ ವಿದ್ಯಾರ್ಹತೆಯಾಗತಕ್ಕುದೆಂದು ನಿರ್ದೇಶಿಸಬಹುದು.

**18. ಅಧ್ಯಯನ ಕೋರ್ಸ್‌ಗಳ ಮತ್ತು ಪರೀಕ್ಷೆಗಳ ಬಗ್ಗೆ ಮಾಹಿತಿಯನ್ನು ಅಗತ್ಯಪಡಿಸಲು ಅಧಿಕಾರ.–** ಮನ್ನಣೆ ಪಡೆದ ಪಶು ವೈದ್ಯಕೀಯ ವಿದ್ಯಾರ್ಹತೆಯನ್ನು ನೀಡುವ ರಾಜ್ಯದಲ್ಲಿನ ಪ್ರತಿಯೊಂದು ಸಂಸ್ಥೆಯು, ಅಂಥ ವಿದ್ಯಾರ್ಹತೆಯನ್ನು ಪಡೆಯಲು ಓದಬೇಕಾದ ಅಧ್ಯಯನ ಕೋರ್ಸ್‌ಗಳು ಮತ್ತು ತೆಗೆದುಕೊಳ್ಳಬೇಕಾದ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, ಯಾವ ವಯಸ್ಸುಗಳಲ್ಲಿ ಅಂಥ ಅಧ್ಯಯನ ಕೋರ್ಸ್‌ಗಳನ್ನು ಓದಬೇಕೋ ಮತ್ತು ಪರೀಕ್ಷೆಗಳನ್ನು ತೆಗೆದುಕೊಳ್ಳಬೇಕೋ ಮತ್ತು ಅಂಥ ವಿದ್ಯಾರ್ಹತೆಯನ್ನು ಪ್ರದಾನ ಮಾಡಲಾಗುವುದೋ ಆ ವಯಸ್ಸುಗಳಿಗೆ ಸಂಬಂಧಿಸಿದಂತೆ ಮತ್ತು ಸಾಮಾನ್ಯವಾಗಿ ಅಂಥ ವಿದ್ಯಾರ್ಹತೆಯನ್ನು ಪಡೆಯಲು ಇರಬೇಕಾದ ಅಗತ್ಯತೆಗಳಿಗೆ ಸಂಬಂಧಿಸಿದಂತೆ ಪರಿಷತ್ತು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂಥ ಮಾಹಿತಿಯನ್ನು ಒದಗಿಸತಕ್ಕುದು.

**19. ಪಶು ವೈದ್ಯಕೀಯ ಸಂಸ್ಥೆಗಳ ಮತ್ತು ಪರೀಕ್ಷೆಗಳ ಪರಿಶೀಲನೆ.–** (1) 12ನೇ ಪ್ರಕರಣದ ಮೇರೆಗೆ ರಚಿಸಲಾದ ಸಮಿತಿಯು, ಪರಿಷತ್ತು ರಚಿಸಿದ ವಿನಿಯಮಗಳೇನಾದರೂ ಇದ್ದರೆ ಅವುಗಳಿಗೊಳಪಟ್ಟು ಯಾವುದೇ ಪಶು ವೈದ್ಯಕೀಯ ಸಂಸ್ಥೆಯನ್ನು ಅಥವಾ ಯಾವುದೇ ಕಾಲೇಜನ್ನು ಅಥವಾ ಪಶು ವೈದ್ಯಕೀಯ ಶಿಕ್ಷಣವನ್ನು ಕೊಡುವ ಇತರ ಯಾವುದೇ ಸಂಸ್ಥೆಯನ್ನು ಪರಿಶೀಲಿಸಲು ಅಥವಾ ಯಾವುದೇ ಪಶು ವೈದ್ಯಕೀಯ ಸಂಸ್ಥೆಯು ನೀಡುವ ಪಶು ವೈದ್ಯಕೀಯ ವಿದ್ಯಾರ್ಹತೆಗೆ ಮನ್ನಣೆ ನೀಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಉದ್ದೇಶಕ್ಕಾಗಿ ಆ ಸಂಸ್ಥೆಯು ನಡೆಸುವ ಯಾವುದೇ ಪರೀಕ್ಷೆಯನ್ನು ಗಮನಿಸಲು ತಾನು ಅವಶ್ಯವೆಂದು ಭಾವಿಸಬಹುದಾದಷ್ಟು ಸಂಖ್ಯೆಯ ಪಶು ವೈದ್ಯಕೀಯ ಪರಿಶೀಲಕರನ್ನು ನೇಮಕ ಮಾಡಬಹುದು.

(2) ಪಶು ವೈದ್ಯಕೀಯ ಪರಿಶೀಲಕರು ಯಾವುದೇ ತರಬೇತಿ ಅಥವಾ ಪರೀಕ್ಷೆ ನಡೆಸುವ ವಿಚಾರದಲ್ಲಿ ಹಸ್ತಕ್ಷೇಪ ಮಾಡತಕ್ಕುದಲ್ಲ. ಆದರೆ, ಪಶು ವೈದ್ಯಕೀಯ ಶಿಕ್ಷಣ ನೀಡುವ ಬಗ್ಗೆ ವಿನಿಯಮಗಳಿಂದ ನಿಯಮಿಸಲಾದ ಸಿಬ್ಬಂದಿ, ಸಾಧನ ಸಾಮಗ್ರಿಗಳು, ಸ್ಥಳಾವಕಾಶ, ತರಬೇತಿ ಮತ್ತು ಇತರ ಸೌಲಭ್ಯಗಳು ಸೇರಿದಂತೆ ಪಶು ವೈದ್ಯಕೀಯ ಶಿಕ್ಷಣದ ಗುಣಮಟ್ಟಗಳು ಸಮರ್ಪಕವಾಗಿದೆಯೇ ಹೇಗೆ ಎಂಬ ಬಗ್ಗೆ ಅಥವಾ ಅವರು ಗಮನಿಸಿದಂಥ ಪ್ರತಿಯೊಂದು ಪರೀಕ್ಷೆಯೂ ಪರ್ಯಾಪ್ತವಾಗಿದೆಯೇ ಹೇಗೆ ಎಂಬ ಬಗ್ಗೆ ಸಮಿತಿಗೆ ವರದಿ ಮಾಡತಕ್ಕುದು.

(3) ಸಮಿತಿಯು ಯಾವುದೇ ಅಂಥ ವರದಿಯ ಪ್ರತಿಯೊಂದನ್ನು ಸಂಬಂಧಿಸಿದ ಪಶು ವೈದ್ಯಕೀಯ ಸಂಸ್ಥೆಗೆ ಕಳುಹಿಸತಕ್ಕುದು ಮತ್ತು ಆ ವರದಿಯ ಬಗ್ಗೆ ಸದರಿ ಸಂಸ್ಥೆಯ ಷರಾಗಳೇನಾದರೂ ಇದ್ದರೆ ಅವುಗಳೊಂದಿಗೆ ಆ ಪ್ರತಿಯನ್ನು ಸಹ ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕುದು.

**20. ಸಂದರ್ಶಕರ ನೇಮಕಾತಿ.–** (1) ಯಾವುದೇ ಪಶು ವೈದ್ಯಕೀಯ ಸಂಸ್ಥೆಯನ್ನು ಅಥವಾ ಪಶು ವೈದ್ಯಕೀಯ ಶಿಕ್ಷಣ ನೀಡುವ ಯಾವುದೇ ಕಾಲೇಜನ್ನು ಅಥವಾ ಇತರ ಸಂಸ್ಥೆಯನ್ನು ಪರಿಶೀಲಿಸಲು

ಅಥವಾ ಮನ್ನಣೆ ಪಡೆದ ಯಾವುದೇ ಪಶು ವೈದ್ಯಕೀಯ ವಿದ್ಯಾರ್ಹತೆಯನ್ನು ನೀಡುವ ಉದ್ದೇಶಕ್ಕಾಗಿ ಯಾವುದೇ ಪಶು ವೈದ್ಯಕೀಯ ಸಂಸ್ಥೆಯು ಯಾವುದೇ ಪರೀಕ್ಷೆಯನ್ನು ನಡೆಸುವಾಗ ಹಾಜರಿರಲು ಆ ಪರಿಷತ್ತು ಅವಶ್ಯವೆಂದು ಭಾವಿಸಬಹುದಾದಷ್ಟು ಸಂಖ್ಯೆಯ ಸಂದರ್ಶಕರನ್ನು ನೇಮಕ ಮಾಡಬಹುದು.

(2) ಯಾರೇ ವ್ಯಕ್ತಿಯನ್ನು, ಆತ ಸದಸ್ಯನಾಗಿರಲಿ ಅಥವಾ ಇಲ್ಲದಿರಲಿ, ಈ ಪ್ರಕರಣದ ಮೇರೆಗೆ ಸಂದರ್ಶಕನನ್ನಾಗಿ ನೇಮಕ ಮಾಡಬಹುದು. ಆದರೆ ಯಾವುದೇ ಪರಿಶೀಲನೆಗಾಗಿ ಅಥವಾ ಪರೀಕ್ಷೆಗಾಗಿ 19ನೇ ಪ್ರಕರಣದ ಮೇರೆಗೆ ಪರಿಶೀಲಕನೆಂದು ನೇಮಕಗೊಂಡ ವ್ಯಕ್ತಿಯನ್ನು ಅದೇ ಪರಿಶೀಲನೆಗಾಗಿ ಅಥವಾ ಪರೀಕ್ಷೆಗಾಗಿ ಸಂದರ್ಶಕನೆಂದು ನೇಮಕ ಮಾಡತಕ್ಕುದಲ್ಲ.

(3) ಸಂದರ್ಶಕರು, ಯಾವುದೇ ತರಬೇತಿ ಅಥವಾ ಪರೀಕ್ಷೆ ನಡೆಸುವ ವಿಚಾರದಲ್ಲಿ ಹಸ್ತಕ್ಷೇಪ ಮಾಡತಕ್ಕುದಲ್ಲ. ಆದರೆ, ಪಶು ವೈದ್ಯಕೀಯ ಶಿಕ್ಷಣ ನೀಡುವ ಬಗ್ಗೆ ವಿನಿಯಮಗಳಿಂದ ನಿಯಮಿಸಲಾದಂಥ ಸಿಬ್ಬಂದಿ, ಸಾಧನ ಸಾಮಗ್ರಿಗಳು, ಸ್ಥಳಾವಕಾಶ, ತರಬೇತಿ ಮತ್ತು ಇತರ ಸೌಲಭ್ಯಗಳೂ ಸೇರಿದಂತೆ ಪಶು ವೈದ್ಯಕೀಯ ಶಿಕ್ಷಣದ ಗುಣಮಟ್ಟಗಳು ಸಮರ್ಪಕವಾಗಿವೆಯೇ ಹೇಗೆ ಎಂಬ ಬಗ್ಗೆ ಅಥವಾ ಅವರು ಗಮನಿಸಿದಂಥ ಪ್ರತಿಯೊಂದು ಪರೀಕ್ಷೆಯು ಪರ್ಯಾಪ್ತವಾಗಿದೆಯೇ ಹೇಗೆ ಎಂಬ ಬಗ್ಗೆ ಅಧ್ಯಕ್ಷನಿಗೆ ವರದಿ ಮಾಡತಕ್ಕುದು.

(4) ಅಧ್ಯಕ್ಷರು ಯಾವುದೇ ನಿರ್ದಿಷ್ಟ ಪ್ರಕರಣದಲ್ಲಿ ಅನ್ಯಥಾ ನಿರ್ದೇಶಿಸಿಲ್ಲದ ಹೊರತು ಸಂದರ್ಶಕನ ವರದಿಯನ್ನು ಗೌಪ್ಯವೆಂದು ಪರಿಗಣಿಸತಕ್ಕುದು:

ಪರಂತು, ಕೇಂದ್ರ ಸರ್ಕಾರವು ಆ ಸಂದರ್ಶಕನ ವರದಿಯ ಒಂದು ಪ್ರತಿಯನ್ನು ಕೇಳಿದರೆ ಪರಿಷತ್ತು ಅದನ್ನು ಒದಗಿಸತಕ್ಕುದು.

**21. ಮನ್ನಣೆಯನ್ನು ಹಿಂತೆಗೆದುಕೊಳ್ಳುವುದು.**– (1) ಸಮಿತಿಯ ಅಥವಾ ಸಂದರ್ಶಕನ ವರದಿಯ ಆಧಾರದ ಮೇಲೆ ಪರಿಷತ್ತಿಗೆ ಕೆಳಕಂಡಂತೆ ಅಂದರೆ, –

(ಎ) ಯಾವುದೇ ಪಶು ವೈದ್ಯಕೀಯ ಸಂಸ್ಥೆಯಲ್ಲಿ ಓದಬೇಕಾದ ಅಧ್ಯಯನ ಕೋರ್ಸ್‌ಗಳು ಮತ್ತು ತೆಗೆದುಕೊಳ್ಳಬೇಕಾದ ಪರೀಕ್ಷೆಗಳು ಆ ಸಂಸ್ಥೆ ನಡೆಸುವ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಪಡೆಯತಕ್ಕ ಪ್ರಾವೀಣ್ಯತೆಯು ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮಗಳಿಗನುಗುಣವಾಗಿಲ್ಲವೆಂದು ಅಥವಾ ಆ ಮೂಲಕ ಅಗತ್ಯಪಡಿಸಲಾದ ಗುಣಮಟ್ಟಗಳಿಗಿಂತ ಕಡಿಮೆ ಮಟ್ಟದಲ್ಲಿದೆ ಎಂದು; ಅಥವಾ

(ಬಿ) ಅಂಥ ಪಶು ವೈದ್ಯಕೀಯ ಸಂಸ್ಥೆಯಲ್ಲಿ ಅಥವಾ ಅದಕ್ಕೆ ಸಂಯೋಜಿಸಲಾದ ಯಾವುದೇ ಕಾಲೇಜಿನಲ್ಲಿ ಅಥವಾ ಇತರ ಸಂಸ್ಥೆಯಲ್ಲಿ ಬೋಧನೆ ಮತ್ತು ತರಬೇತಿಗಾಗಿ ಒದಗಿಸಲಾದ ಸಿಬ್ಬಂದಿ, ಸಾಧನ ಸಾಮಗ್ರಿ, ಸ್ಥಳಾವಕಾಶ, ತರಬೇತಿ ಮತ್ತು ಇತರ ಸೌಲಭ್ಯಗಳು ಪರಿಷತ್ತು ನಿಯಮಿಸಿದ ಗುಣಮಟ್ಟಗಳಿಗೆ ಅನುಗುಣವಾಗಿಲ್ಲವೆಂದು

– ಕಂಡುಬಂದರೆ, ಪರಿಷತ್ತು ಆ ಸಂಬಂಧವಾಗಿ ಕೇಂದ್ರ ಸರ್ಕಾರಕ್ಕೆ ನಿರೂಪಣೆ ಸಲ್ಲಿಸತಕ್ಕುದು.

(2) ಅಂಥ ನಿರೂಪಣೆಯನ್ನು ಪರಿಶೀಲಿಸಿದ ತರುವಾಯ, ಕೇಂದ್ರ ಸರ್ಕಾರವು ಅದನ್ನು ಅಂಥ ಪಶು ವೈದ್ಯಕೀಯ ಸಂಸ್ಥೆಯು ಇರುವ ರಾಜ್ಯದ ರಾಜ್ಯ ಸರ್ಕಾರಕ್ಕೆ ಕಳುಹಿಸಬಹುದು ಮತ್ತು ಆ ರಾಜ್ಯ ಸರ್ಕಾರವು, ಆ ಪಶು ವೈದ್ಯಕೀಯ ಸಂಸ್ಥೆಯು ಯಾವ ಅವಧಿಯೊಳಗೆ ತನ್ನ ವಿವರಣೆಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕೆಂಬ ತಿಳುವಳಿಕೆ ಕೊಟ್ಟು, ತಾನು ವ್ಯಕ್ತಪಡಿಸಬಹುದಾದ ಷರಾಗಳ ಸಹಿತ ಆ ಸಂಸ್ಥೆಗೆ ಕಳುಹಿಸತಕ್ಕುದು.

(3) ವಿವರಣೆಯನ್ನು ಸ್ವೀಕರಿಸಿದ ಮೇಲೆ ಅಥವಾ ಯಾವುದೇ ವಿವರಣೆಯನ್ನು ನಿಗದಿತ ಅವಧಿಯೊಳಗೆ ಸಲ್ಲಿಸದಿದ್ದರೆ, ಆ ಅವಧಿಯು ಮುಕ್ತಾಯವಾದ ತರುವಾಯ ರಾಜ್ಯ ಸರ್ಕಾರವು ಆ ಸಂಬಂಧದಲ್ಲಿ ಕೇಂದ್ರ ಸರ್ಕಾರಕ್ಕೆ ತನ್ನ ಶಿಫಾರಸ್ಸನ್ನು ಕಳುಹಿಸತಕ್ಕುದು.

(4) ಕೇಂದ್ರ ಸರ್ಕಾರವು ತಾನು ಯುಕ್ತವೆಂದು ಭಾವಿಸಬಹುದಾದಂಥ ವಿಚಾರಣೆ ಯಾವುದಾದರೂ ಇದ್ದರೆ ಅದನ್ನು ನಡೆಸಿದ ತರುವಾಯ, ರಾಜಪತ್ರದಲ್ಲಿ ಅಧಿಸೂಚನೆ ಹೊರಡಿಸಿ, ಸದರಿ ಪಶು ವೈದ್ಯಕೀಯ ವಿದ್ಯಾರ್ಹತೆಯು, ನಿರ್ದಿಷ್ಟಪಡಿಸಲಾದ ದಿನಾಂಕಕ್ಕೆ ಮುಂಚೆ ಅದನ್ನು ನೀಡಿದ್ದರೆ ಮನ್ನಣೆ ಪಡೆದ ಪಶು ವೈದ್ಯಕೀಯ ವಿದ್ಯಾರ್ಹತೆಯಾಗತಕ್ಕುದೆಂದು ಅಥವಾ ಸದರಿ ಪಶು ವೈದ್ಯಕೀಯ ವಿದ್ಯಾರ್ಹತೆಯು ಯಾವುದೇ ಪಶು ವೈದ್ಯಕೀಯ ಸಂಸ್ಥೆಗೆ ಸಂಯೋಜಿಸಲಾದ ಯಾವುದೇ ನಿರ್ದಿಷ್ಟ ಕಾಲೇಜಿನ ಅಥವಾ ಸಂಸ್ಥೆಯ ವಿದ್ಯಾರ್ಥಿಗಳಿಗೆ ಅದನ್ನು ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮುಂಚೆ ನೀಡಿದ್ದರೆ ಮನ್ನಣೆ ಪಡೆದ ಪಶು ವೈದ್ಯಕೀಯ ವಿದ್ಯಾರ್ಹತೆಯಾಗತಕ್ಕುದೆಂದು ಅಥವಾ ಸಂದರ್ಭಾನುಸಾರ, ಸದರಿ ಪಶು ವೈದ್ಯಕೀಯ ವಿದ್ಯಾರ್ಹತೆಯು, ಯಾವುದೇ ಪಶು ವೈದ್ಯಕೀಯ ಸಂಸ್ಥೆಗೆ ಸಂಯೋಜಿಸಲಾದ ಮತ್ತು ನಿರ್ದಿಷ್ಟಪಡಿಸಿದ ಕಾಲೇಜಿಗೆ ಅಥವಾ ಸಂಸ್ಥೆಗೆ ಸಂಬಂಧಿಸಿ ನಿರ್ದಿಷ್ಟ ದಿನಾಂಕದ ತರುವಾಯ ನೀಡಿದ್ದರೆ ಮನ್ನಣೆ ಪಡೆದ ಪಶು ವೈದ್ಯಕೀಯ ವಿದ್ಯಾರ್ಹತೆಯಾಗತಕ್ಕುದೆಂದು ಘೋಷಿಸಿದ್ದರೆ ಮಾತ್ರವೇ, ಸಂಬಂಧಪಟ್ಟ ಅನುಸೂಚಿಯಲ್ಲಿ ಸದರಿ ಪಶು ವೈದ್ಯಕೀಯ ವಿದ್ಯಾರ್ಹತೆಯ ಇದಿರು ಒಂದು ನಮೂದನ್ನು ಮಾಡತಕ್ಕುದೆಂದು ನಿರ್ದೇಶಿಸಬಹುದು:

ಪರಂತು, ಅಂಥ ಅಧಿಸೂಚನೆ ಹೊರಡಿಸುವುದಕ್ಕೂ ಮೊದಲು, ಕೇಂದ್ರ ಸರ್ಕಾರವು, ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನೊಂದಿಗೆ ಸಮಾಲೋಚಿಸಬಹುದು.

**22. ಪಶು ವೈದ್ಯಕೀಯ ಶಿಕ್ಷಣದ ಕನಿಷ್ಠ ಗುಣಮಟ್ಟಗಳು.–** (1) ಪರಿಷತ್ತು, ಈ ಅಧಿನಿಯಮವು ವ್ಯಾಪ್ತವಾಗುವ ರಾಜ್ಯಗಳಲ್ಲಿನ ಪಶು ವೈದ್ಯಕೀಯ ಸಂಸ್ಥೆಗಳು ಮನ್ನಣೆ ಪಡೆದ ಪಶು ವೈದ್ಯಕೀಯ ವಿದ್ಯಾರ್ಹತೆಗಳನ್ನು ನೀಡಲು ಅಗತ್ಯವಾದ ಪಶು ವೈದ್ಯಕೀಯ ಶಿಕ್ಷಣದ ಕನಿಷ್ಠ ಗುಣಮಟ್ಟಗಳನ್ನು ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದು.

(2) ಕರಡು ವಿನಿಯಮಗಳ ಪ್ರತಿಗಳನ್ನು ಮತ್ತು ಅವುಗಳಿಗೆ ಆ ತರುವಾಯ ಮಾಡಿದ ಎಲ್ಲಾ ತಿದ್ದುಪಡಿಗಳನ್ನು ಪರಿಷತ್ತು ಸಂಬಂಧಿಸಿದ ರಾಜ್ಯ ಸರ್ಕಾರಕ್ಕೆ ಒದಗಿಸತಕ್ಕುದು ಮತ್ತು ಪರಿಷತ್ತು, ಅಂಥ ವಿನಿಯಮಗಳನ್ನು ಅಥವಾ ಸಂದರ್ಭಾನುಸಾರ, ಅಂಥ ಅವುಗಳ ಯಾವುದೇ ತಿದ್ದುಪಡಿಗಳನ್ನು ಅನುಮೋದನೆಗಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸುವುದಕ್ಕೆ ಮುಂಚೆ ರಾಜ್ಯ ಸರ್ಕಾರವು, ಮೇಲೆ ಹೇಳಲಾದಂಥ ಪ್ರತಿಗಳನ್ನು ಒದಗಿಸಿದ ಮೂರು ತಿಂಗಳ ಒಳಗಾಗಿ ಸ್ವೀಕರಿಸಿದ ರಾಜ್ಯ ಸರ್ಕಾರದ ಟಿಪ್ಪಣಿಗಳನ್ನು ಪರಿಶೀಲಿಸತಕ್ಕುದು.

(3) ಕೇಂದ್ರ ಸರ್ಕಾರವು, ಅಂಥ ವಿನಿಯಮಗಳನ್ನು ಅಥವಾ ಅವುಗಳ ಯಾವುದೇ ತಿದ್ದುಪಡಿಗಳನ್ನು ಅನುಮೋದಿಸುವುದಕ್ಕೆ ಮೊದಲು ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನೊಂದಿಗೆ ಸಮಾಲೋಚಿಸಬಹುದು.

(4) 12ನೇ ಪ್ರಕರಣದ ಮೇರೆಗೆ ರಚಿಸಲಾದ ಸಮಿತಿಯು ವಿನಿಯಮಗಳು ಎಷ್ಟರಮಟ್ಟಿಗೆ ಪರಿಣಾಮಕಾರಿ ಎಂಬುದನ್ನು ಕುರಿತು ಕಾಲಕಾಲಕ್ಕೆ ಪರಿಷತ್ತಿಗೆ ವರದಿ ಮಾಡತಕ್ಕುದು ಮತ್ತು ಅವುಗಳಿಗೆ ತಾನು ಯುಕ್ತವೆಂದು ಯೋಚಿಸಬಹುದಾದಂಥ ತಿದ್ದುಪಡಿಗಳನ್ನು ಪರಿಷತ್ತಿಗೆ ಶಿಫಾರಸ್ಸು ಮಾಡಬಹುದು.

## ಅಧ್ಯಾಯ–III

## ಭಾರತೀಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರು

**23. ಭಾರತೀಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರು.–** (1) ಪರಿಷತ್ತು, ಈ ಅಧಿನಿಯಮವು ಪ್ರಾರಂಭವಾದ ತರುವಾಯ, ಆದಷ್ಟು ಬೇಗನೆ, ವಿನಿಯಮಗಳ ಮೂಲಕ ಉಪಬಂಧಿಸಲಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಭಾರತೀಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರು ಎಂದು ಕರೆಯಲಾಗುವ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರನ್ನು ಇಡಲು ವ್ಯವಸ್ಥೆ ಮಾಡತಕ್ಕುದು. ಮತ್ತು ಆ ರಿಜಿಸ್ಟರು ಮನ್ನಣೆ ಪಡೆದ ಪಶು ವೈದ್ಯಕೀಯ ವಿದ್ಯಾರ್ಹತೆಗಳನ್ನು ಹೊಂದಿರುವ ಮತ್ತು ಈ

ಅಧಿನಿಯಮವು ವ್ಯಾಪ್ತವಾಗುವ ರಾಜ್ಯದ ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಲ್ಲಿ ತತ್ಕಾಲದಲ್ಲಿ ನೋಂದಾಯಿಸಲಾದ ಎಲ್ಲ ವ್ಯಕ್ತಿಗಳ ಹೆಸರುಗಳನ್ನು ಒಳಗೊಂಡಿರತಕ್ಕುದು.

(2) ಈ ಅಧಿನಿಯಮದ ಮತ್ತು ಪರಿಷತ್ತು ಮಾಡಿದ ಯಾವುದೇ ಆದೇಶಗಳ ಉಪಬಂಧಗಳಿಗನುಸಾರವಾಗಿ ಭಾರತೀಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರನ್ನು ಇಡುವುದು ಮತ್ತು ಕಾಲಕಾಲಕ್ಕೆ ಆ ರಿಜಿಸ್ಟರನ್ನು ಪರಿಷ್ಕರಿಸುವುದು ಮತ್ತು ಭಾರತದ ರಾಜಪತ್ರದಲ್ಲಿ ಅಥವಾ ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ಇತರ ಯಾವುದೇ ರೀತಿಯಲ್ಲಿ ಅದನ್ನು ಪ್ರಕಟಿಸುವುದು ಪರಿಷತ್ತಿನ ಕಾರ್ಯದರ್ಶಿಯ ಕರ್ತವ್ಯವಾಗಿರತಕ್ಕುದು.

(3) ಅಂಥ ರಿಜಿಸ್ಟರು ಭಾರತದ ಸಾಕ್ಷ್ಯ ಅಧಿನಿಯಮ, 1872ರ ಅರ್ಥ ವ್ಯಾಪ್ತಿಯೊಳಗೆ ಸಾರ್ವಜನಿಕ ದಾಖಲೆ ಎಂದು ಭಾವಿಸತಕ್ಕುದು ಮತ್ತು ಭಾರತದ ರಾಜಪತ್ರದಲ್ಲಿ ಅದರ ಪ್ರತಿಯನ್ನು ಪ್ರಕಟಿಸುವ ಮೂಲಕ ಅದನ್ನು ದೃಢಪಡಿಸಬಹುದು.

(4) ಪ್ರತಿಯೊಂದು ರಾಜ್ಯ ಪಶು ವೈದ್ಯಕೀಯ ಪರಿಷತ್ತು, ಪ್ರತಿವರ್ಷದ ಏಪ್ರಿಲ್ 1ನೇ ದಿನಾಂಕದ ನಂತರ ಸಾಧ್ಯವಾದಷ್ಟು ಬೇಗನೆ ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನ ಆರು ಮುದ್ರಿತ ಪ್ರತಿಗಳನ್ನು ಪರಿಷತ್ತಿಗೆ ಒದಗಿಸತಕ್ಕುದು ಮತ್ತು ಪ್ರತಿಯೊಂದು ರಾಜ್ಯ ಪಶು ವೈದ್ಯಕೀಯ ಪರಿಷತ್ತು, ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಲ್ಲಿ ಕಾಲಕಾಲಕ್ಕೆ ಮಾಡಲಾದ ಎಲ್ಲ ಸೇರ್ಪಡೆ ಮತ್ತು ಇತರ ತಿದ್ದುಪಡಿಗಳನ್ನು ವಿಳಂಬವಿಲ್ಲದೆ ಪರಿಷತ್ತಿಗೆ ತಿಳಿಸತಕ್ಕುದು.

**24. ಭಾರತೀಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರಿನಲ್ಲಿ ನೋಂದಣಿ.**- ಪರಿಷತ್ತಿನ ಕಾರ್ಯದರ್ಶಿ, ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಲ್ಲಿ ಯಾರೇ ವ್ಯಕ್ತಿಯ ನೋಂದಣಿಯ ವರದಿಯನ್ನು ಸ್ವೀಕರಿಸಿದ ಮೇಲೆ ಅಥವಾ ಯಾರೇ ಅಂಥ ವ್ಯಕ್ತಿಯು ವಿನಿಯಮಗಳ ಮೂಲಕ ಉಪಬಂಧಿಸಲಾದಂಥ ನಮೂನೆ ಮತ್ತು ಅಂಥ ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸಿದ ಮೇಲೆ, ಭಾರತೀಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರಿನಲ್ಲಿ ಅವನ ಹೆಸರನ್ನು ಸೇರಿಸಬಹುದು:

ಪರಂತು, ಸಂಬಂಧಪಟ್ಟ ವ್ಯಕ್ತಿಯು ಮನ್ನಣೆ ಪಡೆದ ಪಶು ವೈದ್ಯಕೀಯ ವಿದ್ಯಾರ್ಹತೆಯನ್ನು ಹೊಂದಿದ್ದಾನೆಂದು ಕಾರ್ಯದರ್ಶಿಗೆ ಮನದಟ್ಟಾಗಿರಬೇಕು.

**25. ನೋಂದಣಿಯ ಪ್ರಮಾಣ ಪತ್ರದ ನೀಡಿಕೆ.**- (1) ಭಾರತೀಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರಿನಲ್ಲಿ ಹೆಸರು ನಮೂದಾಗಿರುವ ಯಾರೇ ವ್ಯಕ್ತಿಯು, ಈ ಸಂಬಂಧವಾಗಿ, ವಿನಿಯಮಗಳ ಮೂಲಕ ಉಪಬಂಧಿಸಲಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸಿ ಹದಿನೈದು ರೂಪಾಯಿಗಳಿಗೆ ಮೀರದ ಅಂಥ ಫೀಜುಗಳನ್ನು ಸಂದಾಯ ಮಾಡಿದ ಮೇಲೆ ನೋಂದಣಿ ಪ್ರಮಾಣ ಪತ್ರವನ್ನು ಪಡೆಯಲು ಅರ್ಹನಾಗಿರತಕ್ಕುದು.

(2) (1)ನೇ ಉಪಪ್ರಕರಣದ ಮೇರೆಗಿನ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಪರಿಷತ್ತು, ಅರ್ಜಿದಾರನಿಗೆ ವಿನಿಯಮಗಳ ಮೂಲಕ ಉಪಬಂಧಿಸಲಾದ ನಮೂನೆಯಲ್ಲಿ ನೋಂದಣಿಯ ಪ್ರಮಾಣ ಪತ್ರವನ್ನು ನೀಡತಕ್ಕುದು:

ಪರಂತು, ಅವನ ಹೆಸರನ್ನು ರಿಜಿಸ್ಟರಿನಿಂದ ತೆಗೆದುಹಾಕಿದ ಮೇಲೆ ಅಂಥ ಪ್ರಮಾಣ ಪತ್ರವು ಸಿಂಧುವಾಗಿರುವುದು ನಿಂತುಹೋಗತಕ್ಕುದು.

(3) ನೋಂದಾಯಿತ ಪ್ರಮಾಣಪತ್ರವು ಕಳೆದುಹೋದ ಅಥವಾ ನಾಶವಾದ ಬಗ್ಗೆ ಪರಿಷತ್ತಿನ ಕಾರ್ಯದರ್ಶಿಗೆ ಮನದಟ್ಟಾಗುವಂತೆ ತೋರಿಸಿ ಕೊಟ್ಟಿರುವಲ್ಲಿ, ಕಾರ್ಯದರ್ಶಿಯು, ವಿನಿಯಮಗಳ ಮೂಲಕ ಉಪಬಂಧಿಸಲಾದಂತೆ ಹತ್ತು ರೂಪಾಯಿಗಳನ್ನು ಮೀರದ ಫೀಜನ್ನು ಸಂದಾಯ ಮಾಡಿದ ಮೇಲೆ, ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ ಪ್ರಮಾಣಪತ್ರದ ನಕಲನ್ನು ನೀಡಬಹುದು.

**26. ಹೆಚ್ಚಿನ ಅರ್ಹತೆಗಳ ನೋಂದಣಿ.–** (1) ಭಾರತೀಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರಿನಲ್ಲಿ ಹೆಸರು ನಮೂದಾಗಿರುವ ಯಾರೇ ವ್ಯಕ್ತಿಯು, ಮನ್ನಣೆ ಪಡೆದ ಪಶು ವೈದ್ಯಕೀಯ ವಿದ್ಯಾರ್ಹತೆಗೆ ಹೆಚ್ಚಿಗೆಯಾಗಿ ಪಶು ವೈದ್ಯಕೀಯ ವಿಜ್ಞಾನದಲ್ಲಿ ಯಾವುದೇ ಸ್ನಾತಕೋತ್ತರ ಪದವಿಯನ್ನು ಅಥವಾ ಡಿಪ್ಲೋಮಾವನ್ನು ಪಡೆದರೆ, ಅವನು ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಅರ್ಜಿ ಸಲ್ಲಿಸಿ ಹದಿನೈದು ರೂಪಾಯಿಗಳಿಗೆ ಮೀರದ ಹಾಗೆ ಅಂಥ ಫೀಜನ್ನು ಸಂದಾಯ ಮಾಡಿದ ಮೇಲೆ, ಅಂಥ ರಿಜಿಸ್ಟರಿನಲ್ಲಿ ಅವನ ಹೆಸರಿನ ಮುಂದೆ ಈಗಾಗಲೇ ಇರುವ ನಮೂದಿಗೆ ಹೆಚ್ಚುವರಿಯಾಗಿ ಅಂಥ ಪದವಿಯನ್ನು ಅಥವಾ ಡಿಪ್ಲೋಮಾವನ್ನು ನಿರೂಪಿಸುವ ಒಂದು ನಮೂದನ್ನು ಹೊಂದಿರಲು ಹಕ್ಕುಳ್ಳವನಾಗತಕ್ಕುದು.

(2) ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಲ್ಲಿ ಯಾರೇ ಅಂಥ ವ್ಯಕ್ತಿಗೆ ಸಂಬಂಧಿಸಿದ ನಮೂದುಗಳನ್ನು ಭಾರತೀಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರಿನಲ್ಲಿ ಮಾಡಲಾಗುವ ಮಾರ್ಪಾಟುಗಳಿಗನುಸಾರವಾಗಿ ಮಾರ್ಪಡಿಸತಕ್ಕುದು.

**27. ಭಾರತೀಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರಿನಿಂದ ಹೆಸರುಗಳನ್ನು ತೆಗೆದುಹಾಕುವುದು.–** ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಲ್ಲಿ ನೋಂದಾಯಿಸಲಾದ ಯಾರೇ ವ್ಯಕ್ತಿಯ ಹೆಸರನ್ನು ಈ ಅಧಿನಿಯಮದ ಮೇರೆಗೆ ಪ್ರದತ್ತವಾದ ಯಾವುದೇ ಅಧಿಕಾರಕ್ಕನುಸಾರವಾಗಿ ಅದರಿಂದ ತೆಗೆದುಹಾಕಿದ್ದರೆ, ಪರಿಷತ್ತು, ಭಾರತೀಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರಿನಿಂದ ಅಂಥ ವ್ಯಕ್ತಿಯ ಹೆಸರನ್ನು ತೆಗೆದುಹಾಕಲು ನಿರ್ದೇಶಿಸತಕ್ಕುದು.

**28. ಭಾರತೀಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರಿನಲ್ಲಿ ಸೇರಿಸಲಾದ ವ್ಯಕ್ತಿಯ ವಾಸಸ್ಥಳದ ಅಥವಾ ವೃತ್ತಿಯ ಸ್ಥಳದ ಬದಲಾವಣೆಯನ್ನು ಕುರಿತು ಸೂಚನೆ ನೀಡುವುದು.–** ಭಾರತೀಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರಿನಲ್ಲಿ ನೋಂದಾಯಿಸಲಾದ ಪ್ರತಿಯೊಬ್ಬ ವ್ಯಕ್ತಿಯು ತನ್ನ ವಾಸಸ್ಥಳದ ಮತ್ತು ವೃತ್ತಿಯ ಸ್ಥಳದ ಯಾವುದೇ ಬದಲಾವಣೆಯನ್ನು ಅಂಥ ಬದಲಾವಣೆಯಾದ ತೊಂಬತ್ತು ದಿವಸಗಳ ಒಳಗಾಗಿ ಪರಿಷತ್ತಿಗೆ ಮತ್ತು ರಾಜ್ಯ ಪಶು ವೈದ್ಯಕೀಯ ಪರಿಷತ್ತಿಗೆ ತಿಳಿಸತಕ್ಕುದು ಮತ್ತು ಅವನು ಹಾಗೆ ಮಾಡಲು ತಪ್ಪಿದರೆ ಪರಿಷತ್ತಿನ ಅಥವಾ ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ಸದಸ್ಯರ ಚುನಾವಣೆಯಲ್ಲಿ ಭಾಗವಹಿಸುವ ಹಕ್ಕನ್ನು, ಕೇಂದ್ರ ಸರ್ಕಾರವು ಆದೇಶದ ಮೂಲಕ ಶಾಶ್ವತವಾಗಿ ಅಥವಾ ಅದರಲ್ಲಿ ಗೊತ್ತುಪಡಿಸಬಹುದಾದಂಥ ಅವಧಿಯವರೆಗೆ ಕಳೆದುಕೊಳ್ಳಲು ಬದ್ಧನಾಗತಕ್ಕುದು.

## ಅಧ್ಯಾಯ–IV

## ನೋಂದಾಯಿತ ಪಶು ವೈದ್ಯಕೀಯ ವೃತ್ತಿಗಾರರ ವಿಶೇಷಾಧಿಕಾರಗಳು

**29. ಭಾರತೀಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರಿನಲ್ಲಿ ಸೇರಿಸಲಾದ ವ್ಯಕ್ತಿಗಳ ವಿಶೇಷ ಅಧಿಕಾರಗಳು.–** ಈ ಅಧಿನಿಯಮದಲ್ಲಿ ನಿರೂಪಿಸಲಾದ ಷರತ್ತುಗಳು ಮತ್ತು ನಿರ್ಬಂಧಗಳಿಗನುಸಾರವಾಗಿ ಭಾರತೀಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರಿನಲ್ಲಿ ತತ್ಕಾಲದಲ್ಲಿ ಹೆಸರನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು, ಅವನ ವಿದ್ಯಾರ್ಹತೆಗಳಿಗನುಸಾರವಾಗಿ ಪಶು ವೈದ್ಯಕೀಯ ವೃತ್ತಿಗಾರನಾಗಿ ವೃತ್ತಿ ನಡೆಸಲು ಹಕ್ಕುಳ್ಳವನಾಗಿರತಕ್ಕುದು ಮತ್ತು ಅಂಥ ವೃತ್ತಿಯ ಸಂಬಂಧದಲ್ಲಿ ಕಾನೂನಿನ ಯಥಾಕ್ರಮದಲ್ಲಿ ಅವನು ಹಕ್ಕು ಹೊಂದಿರಬಹುದಾದಂಥ ಔಷಧಗಳು ಮತ್ತು ಇತರ ಸಾಧನ ಸಾಮಗ್ರಿಗಳಿಗೆ ಸಂಬಂಧಿಸಿದ ಯಾವುದೇ ವೆಚ್ಚಗಳನ್ನು ಮತ್ತು ಯಾವುದೇ ಶುಲ್ಕಗಳನ್ನು ಮತ್ತು ಯಾವುದೇ ಫೀಜುಗಳನ್ನು ವಸೂಲು ಮಾಡಲು ಹಕ್ಕುಳ್ಳವನಾಗತಕ್ಕುದು.

**30. ಭಾರತೀಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರಿನಲ್ಲಿ ನೋಂದಾಯಿಸಲಾದಂಥ ವ್ಯಕ್ತಿಗಳ ಹಕ್ಕುಗಳು.–** ನೋಂದಾಯಿತ ಪಶು ವೈದ್ಯಕೀಯ ವೃತ್ತಿಗಾರನ ಹೊರತಾದ ಯಾರೇ ಇತರ ವ್ಯಕ್ತಿಯು, –

(ಎ) ಸರ್ಕಾರದಲ್ಲಿ ಅಥವಾ ಸ್ಥಳೀಯ ಅಥವಾ ಇತರ ಪ್ರಾಧಿಕಾರವು ನಿರ್ವಹಿಸುವ ಯಾವುದೇ ಸಂಸ್ಥೆಯಲ್ಲಿ ಪಶು ವೈದ್ಯಕೀಯ ವೈದ್ಯನಾಗಿ ಅಥವಾ ಶಸ್ತ್ರಚಿಕಿತ್ಸಕನಾಗಿ ಅಥವಾ ಯಾವುದೇ ಹೆಸರಿನಿಂದ ಕರೆಯಲಾಗುವ ಅದೇ ಬಗೆಯ ಯಾರೇ ಇತರ ಅಧಿಕಾರಿಯಾಗಿ ಪದಧಾರಣ ಮಾಡತಕ್ಕುದಲ್ಲ;

(ಬಿ) ಯಾವುದೇ ರಾಜ್ಯದಲ್ಲಿ ಪಶು ವೈದ್ಯಕೀಯ ವೃತ್ತಿಯನ್ನು ನಡೆಸತಕ್ಕುದಲ್ಲ:

ಪರಂತು, ರಾಜ್ಯ ಸರ್ಕಾರವು, ಆದೇಶದ ಮೂಲಕ, ಯಾವುದೇ ಹೆಸರಿನಿಂದ ಕರೆಯಲಾಗುವ ರಾಜ್ಯ ಪಶು ಸಂಗೋಪನ ನಿರ್ದೇಶನಾಲಯವು ಅಥವಾ ಭಾರತದಲ್ಲಿನ ಯಾವುದೇ ಪಶು ವೈದ್ಯಕೀಯ ಸಂಸ್ಥೆಯು ನೀಡಿದ ಯಾವುದೇ ಹೆಸರಿನಿಂದ ಕರೆಯಲಾಗುವ ಪಶು ವೈದ್ಯಕೀಯ ಮೇಲ್ವಿಚಾರಕ, ಪಶು ವರ್ಧಕ, ಪಶು ವೈದ್ಯ ಸಹಾಯಕ ಹುದ್ದೆಯ ಡಿಪ್ಲೊಮಾವನ್ನು ಅಥವಾ ಪ್ರಮಾಣಪತ್ರವನ್ನು ಹೊಂದಿರುವ ವ್ಯಕ್ತಿಗೆ ನೋಂದಾಯಿತ ಪಶು ವೈದ್ಯಕೀಯ ವೃತ್ತಿಗಾರನ ಮೇಲ್ವಿಚಾರಣೆಯಲ್ಲಿ ಮತ್ತು ನಿರ್ದೇಶನದಲ್ಲಿ ಸಣ್ಣಪುಟ್ಟ ಪಶು ವೈದ್ಯಕೀಯ ಸೇವೆ ಸಲ್ಲಿಸಲು ಅನುಮತಿ ನೀಡಬಹುದು.

**ವಿವರಣೆ:-** "ಸಣ್ಣಪುಟ್ಟ ಪಶು ವೈದ್ಯಕೀಯ ಸೇವೆಗಳು" ಎಂದರೆ ಚುಚ್ಚು ಮದ್ದು ಹಾಕುವುದು, ಹಿಡಾ ಮಾಡುವುದು ಮತ್ತು ಗಾಯ ಕಟ್ಟುವುದು ಮುಂತಾದ ಪ್ರಾರಂಭಿಕ ಪಶು ವೈದ್ಯಕೀಯ ಚಿಕಿತ್ಸೆ ಮತ್ತು ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆ ಹೊರಡಿಸಿ ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಇತರ ಬಗೆಯ ಪ್ರಾರಂಭಿಕ ಚಿಕಿತ್ಸೆ ಅಥವಾ ಅಂಥ ಕಾಯಿಲೆಗಳ ಔಷಧೋಪಚಾರಗಳು;

(ಸಿ) ಸೂಕ್ತ ಅರ್ಹತೆಯುಳ್ಳ ಪಶು ವೈದ್ಯಕೀಯ ವೃತ್ತಿಗಾರನು ಸಹಿ ಮಾಡಬೇಕೆಂದು ಅಥವಾ ಅಧಿಕೃತಗೊಳಿಸಬೇಕೆಂದು ಕಾನೂನಿನ ಮೂಲಕ ಅಗತ್ಯಪಡಿಸಲಾದ ಪಶು ವೈದ್ಯಕೀಯ ಆರೋಗ್ಯ ಪ್ರಮಾಣ ಪತ್ರಕ್ಕೆ ಅಥವಾ ಯಾವುದೇ ಇತರ ಪ್ರಮಾಣ ಪತ್ರಕ್ಕೆ ಸಹಿ ಹಾಕಲು ಮತ್ತು ಅದನ್ನು ಅಧಿಕೃತಗೊಳಿಸಲು ಹಕ್ಕುಳ್ಳವನಾಗತಕ್ಕುದಲ್ಲ;

(ಡಿ) ಭಾರತ ಸಾಕ್ಷ್ಯ ಅಧಿನಿಯಮ, 1872 (1872ರ 1)ರ 45ನೇ ಪ್ರಕರಣದ ಮೇರೆಗೆ, ಪಶು ವೈದ್ಯಕೀಯ ಔಷಧಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಮೇಲೆ ತಜ್ಞನೆಂಬಂತೆ ಯಾವುದೇ ಮಹಜರಿನಲ್ಲಿ ಅಥವಾ ಯಾವುದೇ ನ್ಯಾಯಾಲಯದಲ್ಲಿ ಸಾಕ್ಷ್ಯವನ್ನು ಕೊಡಲು ಹಕ್ಕುಳ್ಳವನಾಗತಕ್ಕುದಲ್ಲ.

## ಅಧ್ಯಾಯ-V

## ಶಿಸ್ತುಪಾಲನೆ

**31. ವೃತ್ತೀಯ ನಡತೆ.-** (1) ಪರಿಷತ್ತು, ವಿನಿಯಮಗಳ ಮೂಲಕ ಪಶು ವೈದ್ಯಕೀಯ ವೃತ್ತಿಗಾರರಿಗೆ ಸಂಬಂಧಪಟ್ಟಂತೆ ವೃತ್ತೀಯ ನಡತೆ ಮತ್ತು ನಡವಳಿಗಳ ಗುಣಮಟ್ಟಗಳನ್ನು ಮತ್ತು ಶಿಷ್ಟಾಚಾರದ ನೀತಿ ಸಂಹಿತೆಯನ್ನು ಗೊತ್ತುಪಡಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಪರಿಷತ್ತು ರಚಿಸಿದ ವಿನಿಯಮಗಳ ಯಾವ ಉಲ್ಲಂಘನೆಗಳು, ವೃತ್ತಿಗೆ ಯಾವುದೇ ರೀತಿಯಲ್ಲಿ ಸಂಬಂಧಪಟ್ಟಂತೆ ಹೇಯ ನಡತೆ ಯಾಗುತ್ತದೆಯೋ ಎಂದರೆ ವೃತ್ತೀಯ ದುರ್ನಡತೆಯಾಗುತ್ತದೆಯೋ ಆ ಉಲ್ಲಂಘನೆಗಳನ್ನು ಆ ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದು ಮತ್ತು ಅಂಥ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ ಪರಿಣಾಮಕಾರಿಯಾಗಿರತಕ್ಕುದು.

## ಅಧ್ಯಾಯ-VI

## ರಾಜ್ಯ ಪಶು ವೈದ್ಯಕೀಯ ಪರಿಷತ್ತುಗಳು

**32. ರಾಜ್ಯ ಪಶು ವೈದ್ಯಕೀಯ ಪರಿಷತ್ತುಗಳ ಸ್ಥಾಪನೆ ಮತ್ತು ರಚನೆ.-** (1) 33ನೇ ಪ್ರಕರಣದ ಮೇರೆಗೆ ಆದ ಒಪ್ಪಂದಕ್ಕನುಸಾರವಾಗಿ ಸ್ಥಾಪಿತವಾಗಿರುವ ಜಂಟಿ ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ಸಂದರ್ಭದಲ್ಲಿ

ಹೊರತು, ರಾಜ್ಯ ಸರ್ಕಾರವು, ರಾಜ್ಯ ಪಶು ವೈದ್ಯಕೀಯ ಪರಿಷತ್ತನ್ನು, ಈ ಕೆಳಕಂಡ ಸದಸ್ಯರನ್ನೊಳಗೊಂಡಂತೆ ಸ್ಥಾಪಿಸತಕ್ಕುದು, ಎಂದರೆ :–

(ಎ) ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಲ್ಲಿ ನೋಂದಾಯಿಸಲಾದ ಪಶು ವೈದ್ಯಕೀಯ ವೃತ್ತಿಗಾರರು ತಮ್ಮ ಪೈಕಿ ಆಯ್ಕೆಮಾಡಿದ ನಾಲ್ಕು ಸದಸ್ಯರು;

(ಬಿ) ರಾಜ್ಯದಲ್ಲಿ ಪಶು ವೈದ್ಯಕೀಯ ಸಂಸ್ಥೆಗಳು ಯಾವುದಾದರೂ ಇದ್ದರೆ ಅವುಗಳ ಮುಖ್ಯಸ್ಥರು, ಪದನಿಮಿತ್ತ;

(ಸಿ) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಮೂವರು ಸದಸ್ಯರು;

(ಡಿ) ಯಾವುದೇ ಹೆಸರಿನಿಂದ ಕರೆಯಲಾಗುವ, ರಾಜ್ಯದ ಪಶು ವೈದ್ಯಕೀಯ ಸೇವೆಗಳ ನಿರ್ದೇಶಕ, ಪದನಿಮಿತ್ತ;

(ಇ) ರಾಜ್ಯ ಪಶು ವೈದ್ಯಕೀಯ ಸಂಘವು ಯಾವುದಾದರೂ ಇದ್ದರೆ ಅದು ನಾಮ ನಿರ್ದೇಶನ ಮಾಡಿದ ಒಬ್ಬ ಸದಸ್ಯ;

(ಎಫ್) ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ರಿಜಿಸ್ಟ್ರಾರ್, ಪದನಿಮಿತ್ತ.

(2) ಸದಸ್ಯರೆಂದು ನಾಮನಿರ್ದೇಶಿತರಾದ ಅಥವಾ ಆಯ್ಕೆಯಾದ ವ್ಯಕ್ತಿಗಳ ಹೆಸರುಗಳನ್ನು ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚಿಸತಕ್ಕುದು.

(3) ಯಾರೇ ವ್ಯಕ್ತಿಯು, ಮನ್ನಣೆ ಪಡೆದ ಪಶು ವೈದ್ಯಕೀಯ ವಿದ್ಯಾರ್ಹತೆಯನ್ನು ಹೊಂದಿರುವ ಹೊರತು ಅವನು ಪರಿಷತ್ತಿನ ಸದಸ್ಯನಾಗಿ ನಾಮನಿರ್ದೇಶನಗೊಳ್ಳಲು ಅಥವಾ ಆಯ್ಕೆಯಾಗಲು ಅರ್ಹನಾಗತಕ್ಕುದಲ್ಲ.

**33. ಅಂತರ್‌ರಾಜ್ಯ ಒಪ್ಪಂದಗಳು.**– (1) ಎರಡು ಅಥವಾ ಹೆಚ್ಚು ರಾಜ್ಯ ಸರ್ಕಾರಗಳು ಈ ಕೆಳಗಿನ ಉದ್ದೇಶಗಳಿಗಾಗಿ ಒಂದು ಒಪ್ಪಂದವನ್ನು ಮಾಡಿಕೊಳ್ಳಬಹುದು. ಆ ಒಪ್ಪಂದದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲಾವಧಿಯವರೆಗೆ ಮತ್ತು ನಿರ್ದಿಷ್ಟಪಡಿಸಬಹುದಾದಂಥ ಇನ್ನೂ ಹೆಚ್ಚಿನ ಕಾಲಾವಧಿಗಳೇನಾದರೂ ಇದ್ದರೆ ಆ ಹೆಚ್ಚಿನ ಕಾಲಾವಧಿಯವರೆಗೆ ಆ ನವೀಕರಣಕ್ಕೊಳಪಟ್ಟು ಅದು ಜಾರಿಯಲ್ಲಿರತಕ್ಕುದು:–

(ಎ) ಭಾಗವಹಿಸುವ ಎಲ್ಲಾ ರಾಜ್ಯಗಳಿಗಾಗಿ ಜಂಟಿ ರಾಜ್ಯ ಪಶು ವೈದ್ಯಕೀಯ ಪರಿಷತ್ತನ್ನು ಸ್ಥಾಪಿಸುವುದು; ಅಥವಾ

(ಬಿ) ಒಂದು ರಾಜ್ಯದ ರಾಜ್ಯ ಪಶು ವೈದ್ಯಕೀಯ ಪರಿಷತ್ತು, ಭಾಗವಹಿಸುವ ಇತರ ರಾಜ್ಯಗಳ ಅಗತ್ಯತೆಗಳನ್ನು ಪೂರೈಸುವ ಸಲುವಾಗಿ ವ್ಯವಸ್ಥೆ ಮಾಡಬಹುದು.

(2) ಈ ಅಧಿನಿಯಮದ ಮೇರೆಗಿನ ಒಪ್ಪಂದವು ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳ ಜೊತೆಗೆ, ಈ ಕೆಳಕಂಡವುಗಳ ಬಗ್ಗೆ ಏರ್ಪಾಟು ಮಾಡಬಹುದು:–

(ಎ) ರಾಜ್ಯ ಪಶು ವೈದ್ಯಕೀಯ ಪರಿಷತ್ತು ಅಥವಾ ಜಂಟಿ ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ಸಂಬಂಧದಲ್ಲಿನ ವೆಚ್ಚಗಳನ್ನು ಭಾಗವಹಿಸುವ ರಾಜ್ಯಗಳ ನಡುವೆ ಹಂಚಿಕೆ ಮಾಡುವುದು;

(ಬಿ) ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರದ ವಿವಿಧ ಪ್ರಕಾರ್ಯಗಳನ್ನು, ಭಾಗವಹಿಸುವ ಯಾವ ರಾಜ್ಯ ಸರ್ಕಾರಗಳು ಚಲಾಯಿಸಬಹುದೆಂಬುದನ್ನು ನಿರ್ಧರಿಸಬಹುದು ಮತ್ತು ಈ ಅಧಿನಿಯಮದಲ್ಲಿ ರಾಜ್ಯ ಸರ್ಕಾರದ ಬಗ್ಗೆ ಮಾಡಿದ ಉಲ್ಲೇಖಗಳನ್ನು ತದನುಸಾರವಾಗಿ ಅರ್ಥೈಸತಕ್ಕುದು;

(ಸಿ) ಭಾಗವಹಿಸುವ ರಾಜ್ಯ ಸರ್ಕಾರಗಳ ನಡುವೆ, ಸಾಮಾನ್ಯವಾಗಿ ಅಥವಾ ಈ ಅಧಿನಿಯಮದ ಮೇರೆಗೆ ಉದ್ಭವಿಸುವ ನಿರ್ದಿಷ್ಟ ವಿಷಯಗಳ ಸಂಬಂಧದಲ್ಲಿ ಸಮಾಲೋಚನೆಗಾಗಿ ವ್ಯವಸ್ಥೆ ಮಾಡುವುದು;

(ಡಿ) ಆ ಒಪ್ಪಂದದ ಪರಿಣಾಮಕಾರಿ ಜಾರಿಗಾಗಿ ಅವಶ್ಯ ಅಥವಾ ವಿಹಿತವೆಂದು ಭಾವಿಸಬಹುದಾದಂತೆ ಈ ಅಧಿನಿಯಮಕ್ಕೆ ಅಸಂಗತವಾಗದಂತೆ ಪ್ರಾಸಂಗಿಕ ಹಾಗೂ ಪೂರಕ ಉಪಬಂಧಗಳನ್ನು ಕಲ್ಪಿಸಬಹುದು.

(3) ಈ ಪ್ರಕರಣದ ಮೇರೆಗಿನ ಒಪ್ಪಂದವನ್ನು, ಭಾಗವಹಿಸುವ ರಾಜ್ಯಗಳ ರಾಜಪತ್ರಗಳಲ್ಲಿ ಪ್ರಕಟಿಸತಕ್ಕದ್ದು.

**34. ಜಂಟಿ ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ರಚನೆ.–** (1) ಜಂಟಿ ರಾಜ್ಯ ಪಶು ವೈದ್ಯಕೀಯ ಪರಿಷತ್ತು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕದ್ದು:–

(ಎ) ಭಾಗವಹಿಸುವ ಪ್ರತಿಯೊಂದು ರಾಜ್ಯದ ರಿಜಿಸ್ಟರಿನಲ್ಲಿ ನೋಂದಾಯಿಸಲಾದ ಪಶು ವೈದ್ಯಕೀಯ ವೃತ್ತಿಗಾರರು, ತಮ್ಮ ಪೈಕಿ ಆಯ್ಕೆ ಮಾಡಿದ ಇಬ್ಬರು ಸದಸ್ಯರು;

(ಬಿ) ಭಾಗವಹಿಸುವ ರಾಜ್ಯಗಳಲ್ಲಿ ಪಶು ವೈದ್ಯಕೀಯ ಸಂಸ್ಥೆಗಳು ಯಾವುದಾದರೂ ಇದ್ದರೆ, ಅವುಗಳ ಮುಖ್ಯಸ್ಥರು, ಪದನಿಮಿತ್ತ;

(ಸಿ) ಭಾಗವಹಿಸುವ ಪ್ರತಿಯೊಂದು ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಇಬ್ಬರು ಸದಸ್ಯರು;

(ಡಿ) ಭಾಗವಹಿಸುವ ಪ್ರತಿಯೊಂದು ರಾಜ್ಯದ ಪಶು ವೈದ್ಯಕೀಯ ಸೇವೆಗಳ ನಿರ್ದೇಶಕ, ಯಾವುದೇ ಹೆಸರಿನಿಂದ ಕರೆಯಲಿ, ಪದನಿಮಿತ್ತ;

(ಇ) ಭಾಗವಹಿಸುವ ಪ್ರತಿಯೊಂದು ರಾಜ್ಯದ ರಾಜ್ಯ ಪಶು ವೈದ್ಯಕೀಯ ಸಂಘಗಳು ಯಾವುದಾದರೂ ಇದ್ದರೆ, ಅವುಗಳಿಂದ ನಾಮನಿರ್ದೇಶಿತನಾದ ಒಬ್ಬ ವ್ಯಕ್ತಿ;

(ಎಫ್) ಜಂಟಿ ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ರಿಜಿಸ್ಟ್ರಾರ್, ಪದನಿಮಿತ್ತ

(2) ಸದಸ್ಯನಾಗಿ ನಾಮನಿರ್ದೇಶನಗೊಂಡ ಅಥವಾ ಆಯ್ಕೆಗೊಂಡ ವ್ಯಕ್ತಿಗಳ ಹೆಸರುಗಳನ್ನು ರಾಜ್ಯ ಸರ್ಕಾರಗಳು ರಾಜ್ಯಗಳ ರಾಜಪತ್ರದಲ್ಲಿ ಅಧಿಸೂಚಿಸತಕ್ಕದ್ದು.

(3) ಯಾರೇ ವ್ಯಕ್ತಿಯು ಮನ್ನಣೆ ಪಡೆದ ಪಶು ವೈದ್ಯಕೀಯ ವಿದ್ಯಾರ್ಹತೆ ಹೊಂದಿರುವ ಹೊರತು, ಅವನು ಜಂಟಿ ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ಸದಸ್ಯನಾಗಿ ನಾಮನಿರ್ದೇಶನಗೊಳ್ಳಲು ಅಥವಾ ಚುನಾಯಿತನಾಗಲು ಅರ್ಹನಾಗತಕ್ಕದ್ದಲ್ಲ.

**35. ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ನಿಗಮನ.–** ಪ್ರತಿಯೊಂದು ರಾಜ್ಯ ಪಶು ವೈದ್ಯಕೀಯ ಪರಿಷತ್ತು, ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿ ಅಧಿಸೂಚಿಸಬಹುದಾದಂಥ ಹೆಸರಿನ ಅಥವಾ ಜಂಟಿ ರಾಜ್ಯ ಪಶು ವೈದ್ಯಕೀಯ ಪರಿಷತ್ತಾದರೆ, ಒಪ್ಪಂದದಲ್ಲಿ ನಿರ್ಧರಿಸಬಹುದಾದಂಥ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಅದು ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ ಆರ್ಜಿಸುವ ಮತ್ತು ಧಾರಣ ಮಾಡುವ ಅಧಿಕಾರದೊಂದಿಗೆ ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು ಮತ್ತು ಅದು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

**36. ಅಧ್ಯಕ್ಷ.–** ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ಅಧ್ಯಕ್ಷನನ್ನು ಆ ಪರಿಷತ್ತಿನ ಸದಸ್ಯರು ತಮ್ಮ ಪೈಕಿ, ನಿಯಮಿಸಬಹುದಾದಂಥ ರೀತಿಯಲ್ಲಿ ಚುನಾಯಿಸಬಹುದು.

**37. ಚುನಾವಣಾ ವಿಧಾನ.–** ಈ ಅಧ್ಯಾಯದ ಮೇರೆಗಿನ ಚುನಾವಣೆಯನ್ನು ನಿಯಮಿಸಲಾದ ರೀತಿಯಲ್ಲಿ ನಡೆಸತಕ್ಕದ್ದು ಮತ್ತು ಯಾವುದೇ ಅಂಥ ಚುನಾವಣೆಯ ಸಂದರ್ಭದಲ್ಲಿ ಯಾವುದೇ ವಿವಾದವು ಉದ್ಭವಿಸಿದರೆ ರಾಜ್ಯ ಸರ್ಕಾರಕ್ಕೆ ಅದರ ತೀರ್ಮಾನಕ್ಕೆ ಒಪ್ಪಿಸತಕ್ಕದ್ದು.

**38. ಪದಾವಧಿಗಳು ಮತ್ತು ಸಾಂದರ್ಭಿಕ ಖಾಲಿ ಸ್ಥಾನಗಳು.–** (1) ಈ ಪ್ರಕರಣದ ಉಪಬಂಧಗಳಿಗೊಳಪಟ್ಟು, ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ಸದಸ್ಯನು ರಾಜ್ಯ ಪಶು ವೈದ್ಯಕೀಯ ಪರಿಷತ್ತಿಗೆ ಆತನು ಆಯ್ಕೆಗೊಂಡ ಅಥವಾ ನಾಮನಿರ್ದೇಶನಗೊಂಡ

ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಅಥವಾ ಅವನ ಉತ್ತರಾಧಿಕಾರಿಯನ್ನು ಯುಕ್ತವಾಗಿ ಚುನಾಯಿಸುವವರೆಗೆ ಅಥವಾ ನಾಮನಿರ್ದೇಶನ ಮಾಡುವವರೆಗೆ ಇವುಗಳಲ್ಲಿ ಯಾವುದು ಹೆಚ್ಚೋ ಆ ಅವಧಿಯವರೆಗೆ ಪದಧಾರಣ ಮಾಡತಕ್ಕುದು:

ಪರಂತು, 32ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಖಂಡದ ಅಥವಾ 34ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ಸದಸ್ಯನು, ಅವನನ್ನು ನಾಮನಿರ್ದೇಶನ ಮಾಡಿರುವ ಪ್ರಾಧಿಕಾರದ ಇಷ್ಟಪರ್ಯಂತ ಪದಧಾರಣ ಮಾಡತಕ್ಕುದು.

(2) ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ಸದಸ್ಯರು ಮರು ಆಯ್ಕೆಗೆ ಅಥವಾ ಸಂದರ್ಭಾನುಸಾರ ಮರು ನಾಮನಿರ್ದೇಶನಕ್ಕೆ ಅರ್ಹರಾಗಿರತಕ್ಕುದು.

(3) ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ಆಯ್ಕೆಗೊಂಡ ಅಥವಾ ನಾಮನಿರ್ದೇಶನಗೊಂಡ ಯಾರೇ ಸದಸ್ಯನು, ಈ ಕೆಳಕಂಡ ಸಂದರ್ಭಗಳಲ್ಲಿ ಎಂದರೆ:-

(ಎ) ಅವನು, ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ಅಭಿಪ್ರಾಯದಲ್ಲಿ, ಸಾಕಷ್ಟು ಕಾರಣವಿಲ್ಲದೆ ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ಸತತ ಮೂರು ಸಭೆಗಳಿಗೆ ಗೈರುಹಾಜರಾದರೆ;

(ಬಿ) ಅವನನ್ನು ಯಾವ ಪದದಿಂದ ನಾಮನಿರ್ದೇಶನ ಮಾಡಲಾಗಿದೆಯೋ ಆ ಪದವನ್ನು ಅವನು ಧಾರಣ ಮಾಡುವುದು ಕೊನೆಗೊಂಡಾಗ;

(ಸಿ) ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಲ್ಲಿ ಯಾವ ಸದಸ್ಯನ ಹೆಸರನ್ನು ಸೇರಿಸಬೇಕಾಗಿದೆಯೋ ಆ ಸದಸ್ಯನ ಸಂದರ್ಭದಲ್ಲಿ ಅವನ ಹೆಸರನ್ನು ರಿಜಿಸ್ಟರಿನಿಂದ ತೆಗೆದುಹಾಕಿರುವಾಗ;

(ಡಿ) ನೈತಿಕ ಅಧಃಪತನಗೊಂಡ ಮತ್ತು ಕಾರಾವಾಸದ ಶಿಕ್ಷೆಯಿಂದ ದಂಡನೀಯವಾದ ಅಪರಾಧದ ಬಗ್ಗೆ ನಿರ್ಣೀತ ಅಪರಾಧಿಯಾದಾಗ;

(ಇ) ಅವನು ಅವಿಮುಕ್ತ ದಿವಾಳಿಯಾದಾಗ;

(ಎಫ್) ಅವನು ಅಸ್ವಸ್ಥಚಿತ್ತನಾದಾಗ ಮತ್ತು ಸಕ್ಷಮ ನ್ಯಾಯಾಲಯವು ಹಾಗೆಂದು ಘೋಷಿಸಿದಾಗ

- ತನ್ನ ಪದತ್ಯಾಗ ಮಾಡಿರುವುದಾಗಿ ಭಾವಿಸತಕ್ಕುದು.

(4) ರಾಜ್ಯ ಪಶು ವೈದ್ಯಕೀಯ ಪರಿಷತ್ತು ಮಾಡಿದ ಯಾವುದೇ ಕಾರ್ಯವನ್ನು ಆ ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ಯಾವುದೇ ಖಾಲಿಸ್ಥಾನವು ಇರುವುದೆಂಬ ಅಥವಾ ಅದರ ಸ್ಥಾಪನೆಯಲ್ಲಿ ಯಾವುದೇ ದೋಷವಿರುವುದೆಂಬ ಕಾರಣ ಮಾತ್ರದಿಂದ ಪ್ರಶ್ನಿಸತಕ್ಕುದಲ್ಲ.

(5) ರಾಜ್ಯ ಪಶು ವೈದ್ಯಕೀಯ ಪರಿಷತ್ತಿನಲ್ಲಿನ ಸಾಂದರ್ಭಿಕ ಖಾಲಿ ಸ್ಥಾನವನ್ನು, ಸಂದರ್ಭಾನುಸಾರವಾಗಿ, ಹೊಸ ಚುನಾವಣೆಯ ಅಥವಾ ನಾಮನಿರ್ದೇಶನದ ಮೂಲಕ ಭರ್ತಿ ಮಾಡತಕ್ಕುದು ಮತ್ತು ಖಾಲಿ ಸ್ಥಾನವನ್ನು ಭರ್ತಿ ಮಾಡಲು ನಾಮನಿರ್ದೇಶಿತ ಅಥವಾ ಚುನಾಯಿತ ವ್ಯಕ್ತಿಯು, ಈ ಹಿಂದೆ ನಾಮನಿರ್ದೇಶಿತನಾಗಿದ್ದ ಅಥವಾ ಚುನಾಯಿತನಾಗಿದ್ದ ಯಾವ ಸದಸ್ಯನ ಸ್ಥಾನವನ್ನು ಪದಧಾರಣ ಮಾಡುವನೋ ಅವನ ಪದಾವಧಿಯ ಉಳಿದ ಅವಧಿಯವರೆಗೆ ಮಾತ್ರ ಪದಧಾರಣ ಮಾಡತಕ್ಕುದು.

(6) ರಾಜ್ಯ ಪಶು ವೈದ್ಯಕೀಯ ಪರಿಷತ್ತು ತನ್ನ ಸಭೆಗಳಲ್ಲಿ ಕಾರ್ಯಕಲಾಪ ನಿರ್ವಹಣೆಗೆ ಸಂಬಂಧಪಟ್ಟಂತೆ ನಿಯಮಿಸಬಹುದಾದಂಥ ಪ್ರಕ್ರಿಯಾ ನಿಯಮಗಳನ್ನು ಅನುಸರಿಸತಕ್ಕುದು.

**39**. **ರಾಜೀನಾಮೆ.**- (1) ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ಅಧ್ಯಕ್ಷ, ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ಹೆಸರಿಗೆ ಬರೆದು ರಿಜಿಸ್ಟ್ರಾರನಿಗೆ ತಲುಪಿಸಿದ ಪತ್ರದ ಮೂಲಕ ಯಾವುದೇ ಕಾಲದಲ್ಲಿ ತನ್ನ ಅಧಿಕಾರ ಪದಕ್ಕೆ ರಾಜೀನಾಮೆ ನೀಡಬಹುದು ಮತ್ತು ಆ ರಾಜಿನಾಮೆಯು, ಅದನ್ನು ಪರಿಷತ್ತು ಅಂಗೀಕರಿಸಿದ ದಿನಾಂಕದಿಂದ ಅಥವಾ ರಿಜಿಸ್ಟ್ರಾರನು ರಾಜೀನಾಮೆಯನ್ನು ಸ್ವೀಕರಿಸಿದ ದಿನಾಂಕದಿಂದ

ತೊಂಬತ್ತು ದಿವಸಗಳು ಮುಕ್ತಾಯವಾದಂದಿನಿಂದ ಇದರಲ್ಲಿ ಯಾವುದು ಮೊದಲೋ ಆ ದಿನಾಂಕದಿಂದ ಪರಿಣಾಮಗೊಳ್ಳತಕ್ಕುದು.

(2) ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ಸದಸ್ಯನು, ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ಅಧ್ಯಕ್ಷನ ಹೆಸರಿಗೆ ಬರೆದ ಪತ್ರದ ಮೂಲಕ ಯಾವುದೇ ಕಾಲದಲ್ಲಿ ತನ್ನ ಅಧಿಕಾರ ಪದಕ್ಕೆ ರಾಜೀನಾಮೆಯನ್ನು ನೀಡಬಹುದು ಮತ್ತು ಅಂಥ ಪ್ರತಿಯೊಂದು ರಾಜೀನಾಮೆಯು, ಅಧ್ಯಕ್ಷನು ಅದನ್ನು ಅಂಗೀಕರಿಸಿದ ದಿನಾಂಕದಿಂದ ಅಥವಾ ಅಧ್ಯಕ್ಷನು ರಾಜೀನಾಮೆಯನ್ನು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿವಸಗಳು ಮುಕ್ತಾಯವಾದಂದಿನಿಂದ ಇದರಲ್ಲಿ ಯಾವುದು ಮೊದಲೋ ಆ ದಿನಾಂಕದಿಂದ ಪರಿಣಾಮವಾಗತಕ್ಕುದು.

**40. ಕಾರ್ಯನಿರ್ವಾಹಕ ಮತ್ತು ಇತರ ಸಮಿತಿಗಳು.-** ನಿಯಮಿಸಬಹುದಾದಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೊಳಪಟ್ಟು, ರಾಜ್ಯ ಪಶು ವೈದ್ಯಕೀಯ ಪರಿಷತ್ತು, ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ಯಾವುದೇ ಅಧಿಕಾರವನ್ನು ಚಲಾಯಿಸಲು ಅಥವಾ ಯಾವುದೇ ಕರ್ತವ್ಯವನ್ನು ನಿರ್ವಹಿಸಲು ಅಥವಾ ರಾಜ್ಯ ಪಶು ವೈದ್ಯಕೀಯ ಪರಿಷತ್ತು ಉಲ್ಲೇಖಿಸಬಹುದಾದಂತೆ ಯಾವುದೇ ವಿಷಯವನ್ನು ಕುರಿತು ವಿಚಾರಣೆ ನಡೆಸಲು, ಅದಕ್ಕೆ ಸಂಬಂಧಿಸಿದಂತೆ ವರದಿ ಮಾಡಲು ಅಥವಾ ಅದರ ಬಗ್ಗೆ ಸಲಹೆ ನೀಡಲು ಕಾರ್ಯ ನಿರ್ವಾಹಕ ಸಮಿತಿಯನ್ನು ಮತ್ತು ಇತರ ಸಮಿತಿಗಳನ್ನು ರಚಿಸಬಹುದು.

**41. ಫೀಜುಗಳು ಮತ್ತು ಭತ್ಯೆಗಳು.-** ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ಅಧ್ಯಕ್ಷರು ಮತ್ತು ಇತರ ಸದಸ್ಯರು ಮತ್ತು ಸಮಿತಿಗಳ ಸದಸ್ಯರು (ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ಸದಸ್ಯರ ಹೊರತು) ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ಮತ್ತು ಸಮಿತಿಗಳ ಸಭೆಗಳಿಗೆ ಹಾಜರಾಗಿದ್ದಕ್ಕಾಗಿ ನಿಯಮಿಸಬಹುದಾದಂಥ ಫೀಜುಗಳನ್ನು ಮತ್ತು ಭತ್ಯೆಗಳನ್ನು ಸಂದಾಯ ಮಾಡತಕ್ಕುದು.

**42. ರಿಜಿಸ್ಟ್ರಾರನ ಮತ್ತು ಇತರ ಅಧಿಕಾರಿಗಳ ಅಥವಾ ನೌಕರರ ನೇಮಕ.-** (1) ರಾಜ್ಯ ಪಶು ವೈದ್ಯಕೀಯ ಪರಿಷತ್ತು, ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯನ್ನು ಪಡೆದು ಒಬ್ಬ ರಿಜಿಸ್ಟ್ರಾರನನ್ನು ನೇಮಕ ಮಾಡಬಹುದು ಮತ್ತು ಅವನು, ರಾಜ್ಯ ಪಶು ವೈದ್ಯಕೀಯ ಪರಿಷತ್ತು ಯಾರೇ ವ್ಯಕ್ತಿಯನ್ನು ಖಜಾಂಚಿಯಾಗಿ ನೇಮಿಸದಿರುವಲ್ಲಿ, ಖಜಾಂಚಿಯಾಗಿ ಸಹ ಕಾರ್ಯ ನಿರ್ವಹಿಸತಕ್ಕುದು ಮತ್ತು ಪರಿಷತ್ತು ಈ ಅಧಿನಿಯಮದ ಉದ್ದೇಶಗಳ ಜಾರಿಗಾಗಿ ತಾನು ಅವಶ್ಯವೆಂದು ಭಾವಿಸಬಹುದಾದಂಥ ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ನೇಮಕ ಮಾಡಬಹುದು.

(2) ರಾಜ್ಯ ಪಶು ವೈದ್ಯಕೀಯ ಪರಿಷತ್ತಿನಿಂದ ನೇಮಕಗೊಂಡ ರಿಜಿಸ್ಟ್ರಾರನ ಮತ್ತು ಇತರ ಅಧಿಕಾರಿಗಳ ಮತ್ತು ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕುದು.

(3) ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ರಿಜಿಸ್ಟ್ರಾರನನ್ನು, ಮತ್ತು ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ಭಾರತ ದಂಡ ಪ್ರಕ್ರಿಯಾ ಸಂಹಿತೆಯ 21ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಲೋಕನೌಕರರೆಂಬುದಾಗಿ ಭಾವಿಸತಕ್ಕುದು.

(4) ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ಎಲ್ಲಾ ಆದೇಶಗಳನ್ನು ಮತ್ತು ತೀರ್ಮಾನಗಳನ್ನು ಮತ್ತು ಇತರ ಲಿಖಿತಗಳನ್ನು ರಿಜಿಸ್ಟ್ರಾರನ ಅಥವಾ ಈ ಸಂಬಂಧವಾಗಿ ರಾಜ್ಯ ಪಶು ವೈದ್ಯಕೀಯ ಪರಿಷತ್ತು ಯುಕ್ತವಾಗಿ ಅಧಿಕೃತಗೊಳಿಸಿದ ಯಾವನೇ ಇತರ ಅಧಿಕಾರಿಯ ಸಹಿಯಿಂದ ಅಧಿಪ್ರಮಾಣಿಸಿರತಕ್ಕುದು.

(5) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ರಾಜ್ಯ ಪಶು ವೈದ್ಯಕೀಯ ಪರಿಷತ್ತು ರಚನೆಯಾದ ತರುವಾಯದ ಮೊದಲ ಎರಡು ವರ್ಷಗಳಿಗಾಗಿ, ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ರಿಜಿಸ್ಟ್ರಾರನು ರಾಜ್ಯ ಸರ್ಕಾರವು ನೇಮಕ ಮಾಡಿದ ವ್ಯಕ್ತಿಯಾಗಿರತಕ್ಕುದು. ಅವನು ರಾಜ್ಯ ಸರ್ಕಾರದ ಇಷ್ಟಪರ್ಯಂತ ಪದಧಾರಣ ಮಾಡಿರತಕ್ಕುದು.

**43. ರಾಜ್ಯ ಪಶು ವೈದ್ಯಕೀಯ ಪರಿಷತ್ತು ಒದಗಿಸಬೇಕಾದ ಮಾಹಿತಿ.-** (1) ರಾಜ್ಯ ಪಶು ವೈದ್ಯಕೀಯ ಪರಿಷತ್ತು, ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂತೆ ವರದಿಗಳನ್ನು, ತನ್ನ ಟಿಪ್ಪಣಿಗಳ

ಮತ್ತು ಕಾರ್ಯ ನಿರ್ವಾಹಕ ಸಮಿತಿಯ ಟಿಪ್ಪಣಿಗಳ ಪ್ರತಿಗಳನ್ನು ಮತ್ತು ತನ್ನ ಲೆಕ್ಕಪತ್ರಗಳ ಸಾರಾಂಶವನ್ನು ರಾಜ್ಯ ಸರ್ಕಾರಕ್ಕೆ ಒದಗಿಸತಕ್ಕುದು ಮತ್ತು ರಾಜ್ಯ ಸರ್ಕಾರಕ್ಕೆ ಹಾಗೆ ಒದಗಿಸಲಾದ ಎಲ್ಲಾ ಸಾಮಗ್ರಿಯ ಪ್ರತಿಗಳನ್ನು ಪರಿಷತ್ತಿಗೆ ಕಳುಹಿಸತಕ್ಕುದು.

(2) ರಾಜ್ಯ ಸರ್ಕಾರವು ತಾನು ಯುಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಈ ಪ್ರಕರಣದ ಮೇರೆಗೆ, ತನಗೆ ಒದಗಿಸಲಾದ ಯಾವುದೇ ವರದಿಯನ್ನು, ಪ್ರತಿಯನ್ನು ಅಥವಾ ಸಾರಾಂಶವನ್ನು ಪ್ರಕಟಿಸಬಹುದು.

## ಅಧ್ಯಾಯ-VII

## ನೋಂದಣಿ

**44. ರಾಜ್ಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರನ್ನು ತಯಾರಿಸುವುದು ಮತ್ತು ನಿರ್ವಹಿಸುವುದು.-** (1) ರಾಜ್ಯ ಸರ್ಕಾರವು, ಸಾಧ್ಯವಾದಷ್ಟು ಬೇಗನೆ ಈ ಮುಂದೆ ಉಪಬಂಧಿಸಲಾದ ರೀತಿಯಲ್ಲಿ, ರಾಜ್ಯದ ಸಲುವಾಗಿ ರಾಜ್ಯ ಪಶು ವೈದ್ಯ ರಿಜಿಸ್ಟರು ಎಂದು ಕರೆಯಲಾಗುವ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರನ್ನು ತಯಾರಿಸುವ ವ್ಯವಸ್ಥೆ ಮಾಡತಕ್ಕುದು.

(2) ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ಸ್ಥಾಪನೆಯಾದ ಮೇಲೆ ಅದು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ರಾಜ್ಯ ಪಶು ವೈದ್ಯಕೀಯ ರಿಜಿಸ್ಟರನ್ನು ನಿರ್ವಹಿಸುವ ಕರ್ತವ್ಯವನ್ನು ವಹಿಸಿಕೊಳ್ಳತಕ್ಕುದು.

(3) ರಾಜ್ಯ ಪಶು ವೈದ್ಯಕೀಯ ರಿಜಿಸ್ಟರು, ಮನ್ನಣೆ ಪಡೆದ ಪಶು ವೈದ್ಯಕೀಯ ಅರ್ಹತೆಗಳನ್ನು ಹೊಂದಿರುವ ವ್ಯಕ್ತಿಗಳ ಹೆಸರುಗಳನ್ನು ಒಳಗೊಂಡಿರತಕ್ಕುದು.

(4) ರಾಜ್ಯ ಪಶು ವೈದ್ಯಕೀಯ ರಿಜಿಸ್ಟರು ಈ ಕೆಳಕಂಡ ವಿವರಗಳನ್ನು ಒಳಗೊಂಡಿರತಕ್ಕುದು, ಎಂದರೆ:-

(ಎ) ನೋಂದಾಯಿತ ವ್ಯಕ್ತಿಯ ಪೂರ್ಣ ಹೆಸರು, ರಾಷ್ಟ್ರೀಯತೆ ಮತ್ತು ನಿವಾಸದ ವಿಳಾಸ;

(ಬಿ) ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಲ್ಲಿ ಅವನ ಹೆಸರು ಸೇರ್ಪಡೆಯಾದ ದಿನಾಂಕ;

(ಸಿ) ನೋಂದಣಿಗೆ ಅವನ ಅರ್ಹತೆ ಮತ್ತು ಅಂಥ ಅರ್ಹತೆಯನ್ನು ಪಡೆದ ದಿನಾಂಕ ಮತ್ತು ಅದನ್ನು ಪ್ರದಾನ ಮಾಡಿದ ಪ್ರಾಧಿಕಾರ;

(ಡಿ) ಅವನ ವೃತ್ತೀಯ ವಿಳಾಸ; ಮತ್ತು

(ಇ) ನಿಯಮಿಸಬಹುದಾದಂಥ ಹೆಚ್ಚಿನ ವಿವರಗಳು.

**45. ರಿಜಿಸ್ಟರನ್ನು ಆರಂಭದಲ್ಲಿ ತಯಾರಿಸುವುದು.-** (1) ರಾಜ್ಯ ಪಶು ವೈದ್ಯಕೀಯ ರಿಜಿಸ್ಟರನ್ನು ಆರಂಭದಲ್ಲಿ ತಯಾರಿಸುವ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸಿ, ಮನ್ನಣೆ ಪಡೆದ ಪಶು ವೈದ್ಯಕೀಯ ವಿದ್ಯಾರ್ಹತೆಗಳನ್ನು ಹೊಂದಿರುವ ಮೂರು ವ್ಯಕ್ತಿಗಳನ್ನು ಒಳಗೊಂಡ ನೋಂದಣಿ ನ್ಯಾಯಾಧಿಕರಣವನ್ನು ರಚಿಸತಕ್ಕುದು ಮತ್ತು ರಿಜಿಸ್ಟ್ರಾರನನ್ನು ಸಹ ನೇಮಿಸತಕ್ಕುದು ಮತ್ತು ಅವನು ನ್ಯಾಯಾಧಿಕರಣದ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸತಕ್ಕುದು.

(2) ರಾಜ್ಯ ಸರ್ಕಾರವು, ಅದೇ ಅಧಿಸೂಚನೆಯ ಅಥವಾ ಅಂಥದೇ ಅಧಿಸೂಚನೆಯ ಮೂಲಕ ಇಪ್ಪತ್ತೈದು ರೂಪಾಯಿಗಳಿಗೂ ಮೀರದ ನಿಯಮಿಸಲಾದ ಫೀಜನ್ನು ಸಂದಾಯ ಮಾಡಿ, ನೋಂದಣಿ ನ್ಯಾಯಾಧಿಕರಣಕ್ಕೆ ನೋಂದಣಿಗಾಗಿ ಸಲ್ಲಿಸತಕ್ಕ ಅರ್ಜಿಯನ್ನು ಯಾವ ದಿನಾಂಕದಂದು ಅಥವಾ ಯಾವ ದಿನಾಂಕಕ್ಕೆ ಮೊದಲು ಸಲ್ಲಿಸತಕ್ಕದ್ದೋ ಆ ದಿನಾಂಕವನ್ನು ಗೊತ್ತುಪಡಿಸತಕ್ಕುದು.

(3) ನೋಂದಣಿ ನ್ಯಾಯಾಧಿಕರಣವು, ಗೊತ್ತುಪಡಿಸಿದ ದಿನಾಂಕದಂದು ಅಥವಾ ಅದಕ್ಕೂ ಮುಂಚೆ ಸ್ವೀಕರಿಸಿದ ಪ್ರತಿಯೊಂದು ಅರ್ಜಿಯನ್ನು ಪರೀಕ್ಷಿಸತಕ್ಕುದು ಮತ್ತು 46ನೇ ಪ್ರಕರಣದ ಮೇರೆಗೆ ನೋಂದಣಿಗೆ

ಅರ್ಜಿದಾರನು ಅರ್ಹನಾಗಿರುವನೆಂದು ಅದಕ್ಕೆ ಮನದಟ್ಟಾದರೆ ಅದು ರಿಜಿಸ್ಟರಿನಲ್ಲಿ ಅರ್ಜಿದಾರನ ಹೆಸರನ್ನು ನಮೂದಿಸುವ ಬಗ್ಗೆ ನಿರ್ದೇಶಿಸತಕ್ಕುದು.

(4) ಹಾಗೇ ತಯಾರಿಸಲಾದ ರಿಜಿಸ್ಟರನ್ನು ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದ ರೀತಿಯಲ್ಲಿ ಆ ತರುವಾಯ ಪ್ರಕಟಿಸತಕ್ಕುದು ಮತ್ತು ಹಾಗೆ ಪ್ರಕಟಿಸಿದ ರಿಜಿಸ್ಟರಿನಲ್ಲಿ ನೋಂದಣಿ ನ್ಯಾಯಾಧಿಕರಣದ ವ್ಯಕ್ತವಾದ ಅಥವಾ ಇಂಗಿತವಾದ ತೀರ್ಮಾನದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಅಂಥ ಪ್ರಕಟಣೆಯ ದಿನಾಂಕದಿಂದ ಅರವತ್ತು ದಿವಸಗಳ ಒಳಗಾಗಿ, ಈ ಸಂಬಂಧವಾಗಿ ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ರಾಜ್ಯ ಸರ್ಕಾರದಿಂದ ನೇಮಕಗೊಂಡ ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಬಹುದು.

(5) ರಿಜಿಸ್ಟ್ರಾರನು, (4)ನೇ ಉಪ ಪ್ರಕರಣದ ಮೇರೆಗೆ ನೇಮಕಗೊಂಡ ಪ್ರಾಧಿಕಾರದ ತೀರ್ಮಾನಕ್ಕನುಸಾರವಾಗಿ ರಿಜಿಸ್ಟರನ್ನು ತಿದ್ದುಪಡಿ ಮಾಡತಕ್ಕುದು ಮತ್ತು ಆ ತರುವಾಯ ರಿಜಿಸ್ಟರಿನಲ್ಲಿ ಹೆಸರು ನಮೂದಾಗಿರುವ ಪ್ರತಿಯೊಬ್ಬ ವ್ಯಕ್ತಿಗೆ ನಿಯಮಿಸಲಾದ ನಮೂನೆಯಲ್ಲಿ ನೋಂದಣಿ ಪ್ರಮಾಣ ಪತ್ರವನ್ನು ನೀಡತಕ್ಕುದು.

(6) ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ಸ್ಥಾಪನೆಯ ನಂತರ ಆ ರಿಜಿಸ್ಟರನ್ನು ಪರಿಷತ್ತಿನ ಅಭಿರಕ್ಷೆಗೆ ವಹಿಸಿಕೊಡತಕ್ಕುದು ಮತ್ತು ರಾಜ್ಯ ಸರ್ಕಾರವು, ಆರಂಭದ ರಿಜಿಸ್ಟರಿನಲ್ಲಿ ನೋಂದಣಿಗಾಗಿ ಸಂದಾಯವಾದ ಎಲ್ಲಾ ಅರ್ಜಿ ಫೀಜುಗಳನ್ನು ಅಥವಾ ಅದರ ಯಾವುದೇ ನಿರ್ದಿಷ್ಟ ಭಾಗವನ್ನು ರಾಜ್ಯ ಪಶು ವೈದ್ಯಕೀಯ ಪರಿಷತ್ತಿಗೆ ಜಮೆ ಮಾಡತಕ್ಕುದೆಂದು ಆದೇಶಿಸಬಹುದು.

**46. ರಿಜಿಸ್ಟರು ತಯಾರಾಗುವಾಗ ನಮೂದಾಗಲು ಅರ್ಹತೆಗಳು.**- ಇಪ್ಪತ್ತೈದು ರೂಪಾಯಿಗಳಿಗೂ ಮೀರದ ನಿಯಮಿಸಲಾದ ಫೀಜನ್ನು ಸಂದಾಯ ಮಾಡಿದರೆ, ರಾಜ್ಯದಲ್ಲಿ ವಾಸವಾಗಿರುವ ಮತ್ತು ಮನ್ನಣೆ ಪಡೆದ ಪಶು ವೈದ್ಯಕೀಯ ವಿದ್ಯಾರ್ಹತೆಗಳನ್ನು ಹೊಂದಿರುವ ಯಾರೇ ವ್ಯಕ್ತಿಯು ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಲ್ಲಿ ಹೆಸರು ನಮೂದಾಗಲು ಅರ್ಹನಾಗತಕ್ಕುದು.

**47. ನೋಂದಣಿಗಾಗಿನ ಅರ್ಜಿಗಳ ಪರಿಶೀಲನೆ.**- (1) 45ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನೋಂದಣಿಗಾಗಿ ಅರ್ಜಿಗಳನ್ನು ಸ್ವೀಕರಿಸಲು ಗೊತ್ತುಪಡಿಸಿದ ದಿನಾಂಕದ ತರುವಾಯ ನೋಂದಣಿಗಾಗಿನ ಎಲ್ಲಾ ಅರ್ಜಿಗಳನ್ನು ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ರಿಜಿಸ್ಟ್ರಾರನಿಗೆ ಕಳುಹಿಸತಕ್ಕುದು ಮತ್ತು ಅದರೊಂದಿಗೆ ಇಪ್ಪತ್ತೈದು ರೂಪಾಯಿಗಳಿಗೆ ಮೀರದ ನಿಯಮಿಸಲಾದ ಫೀಜನ್ನು ಸಂದಾಯ ಮಾಡಿರತಕ್ಕುದು.

(2) ಅಂಥ ಅರ್ಜಿ ಬಂದಾಗ, ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ರಿಜಿಸ್ಟ್ರಾರನು, ಅರ್ಜಿದಾರನು ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಲ್ಲಿ ಅವನ ಹೆಸರನ್ನು ನಮೂದಿಸಲು ಅರ್ಹತೆ ಹೊಂದಿರುವನೆಂದು ಅಭಿಪ್ರಾಯಪಟ್ಟರೆ ರಿಜಿಸ್ಟ್ರಾರನು ಆ ಅರ್ಜಿದಾರನ ಹೆಸರನ್ನು ರಿಜಿಸ್ಟರಿನಲ್ಲಿ ನಮೂದಿಸತಕ್ಕುದು:

ಪರಂತು, ರಾಜ್ಯದ ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಿಂದ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಯಾವ ವ್ಯಕ್ತಿಯ ಹೆಸರನ್ನು ತೆಗೆದುಹಾಕಲಾಗಿದೆಯೋ ಆ ಯಾರೇ ವ್ಯಕ್ತಿಯು, ಯಾವ ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ರಿಜಿಸ್ಟರಿನಿಂದ ಅವನ ಹೆಸರನ್ನು ತೆಗೆದುಹಾಕಲಾಯಿತೋ ಆ ಪರಿಷತ್ತಿನ ಅನುಮೋದನೆಯ ಹೊರತು ಇತರ ರಾಜ್ಯದ ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಲ್ಲಿ ಹೆಸರು ನೋಂದಾಯಿಸಲು ಹಕ್ಕುಳ್ಳವನಾಗತಕ್ಕುದಲ್ಲ.

(3) ನೋಂದಣಿಗಾಗಿನ ಯಾರೇ ವ್ಯಕ್ತಿಯ ಅರ್ಜಿಯನ್ನು ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ರಿಜಿಸ್ಟ್ರಾರನು ತಿರಸ್ಕರಿಸಿದರೆ ಆ ಯಾರೇ ವ್ಯಕ್ತಿಯು ಅಂಥ ತಿರಸ್ಕರಣೆಯ ದಿನಾಂಕದಿಂದ ಮೂರು ತಿಂಗಳ ಒಳಗಾಗಿ ರಾಜ್ಯ ಪಶು ವೈದ್ಯಕೀಯ ಪರಿಷತ್ತಿಗೆ ಅಪೀಲು ಸಲ್ಲಿಸಬಹುದು.

(4) (3)ನೇ ಉಪಪ್ರಕರಣದ ಮೇರೆಗೆ ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ತೀರ್ಮಾನದಿಂದ ಬಾಧಿತನಾಗಿರುವ ಯಾರೇ ವ್ಯಕ್ತಿಯು ಅಂಥ ತೀರ್ಮಾನವನ್ನು ಅವನಿಗೆ ತಿಳಿಸಿದಂದಿನಿಂದ ಅರವತ್ತು ದಿವಸಗಳ ಒಳಗಾಗಿ ರಾಜ್ಯ ಸರ್ಕಾರಕ್ಕೆ ಅಪೀಲು ಸಲ್ಲಿಸಬಹುದು.

(5) ಈ ಪ್ರಕರಣದ ಮೇರೆಗೆ ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಲ್ಲಿ ಹೆಸರನ್ನು ನಮೂದಿಸಿದ ನಂತರ, ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ರಿಜಿಸ್ಟ್ರಾರನು ನೋಂದಣಿಯ ಪ್ರಮಾಣ ಪತ್ರವನ್ನು ನಿಯಮಿಸಲಾದ ನಮೂನೆಯಲ್ಲಿ ನೀಡತಕ್ಕುದು.

**48. ನವೀಕರಣದ ಫೀಜುಗಳು.**- (1) ರಾಜ್ಯ ಸರ್ಕಾರವು, ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸಿ, ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಲ್ಲಿ ಹೆಸರನ್ನು ಉಳಿಸಿಕೊಳ್ಳಲು ಹದಿನೈದು ರೂಪಾಯಿಗಳಿಗೆ ಮೀರದಂತೆ ನಿಯಮಿಸಬಹುದಾದಂಥ ನವೀಕರಣ ಫೀಜನ್ನು ರಾಜ್ಯ ಪಶು ವೈದ್ಯಕೀಯ ಪರಿಷತ್ತಿಗೆ ಪ್ರತಿ ಐದು ವರ್ಷಗಳಿಗೊಮ್ಮೆ ಸಂದಾಯ ಮಾಡತಕ್ಕುದೆಂದು ನಿರ್ದೇಶಿಸಬಹುದು ಮತ್ತು ಅಂಥ ನಿರ್ದೇಶನವನ್ನು ನೀಡಿದ್ದರೆ ಅಂಥ ನವೀಕರಣ ಫೀಜು ಯಾವ ವರ್ಷಕ್ಕೆ ಸಂಬಂಧಪಡುವುದೋ ಆ ವರ್ಷದ ಏಪ್ರಿಲ್ 1ನೇ ದಿನಾಂಕಕ್ಕೆ ಮುಂಚೆ ಅದು ಸಲ್ಲಿಸತಕ್ಕದ್ದಾಗಿರತಕ್ಕುದು.

(2) ನವೀಕರಣ ಫೀಜನ್ನು ಸದರಿ ಅವಧಿಯೊಳಗಾಗಿ ಸಂದಾಯ ಮಾಡದಿದ್ದರೆ, ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ರಿಜಿಸ್ಟ್ರಾರನು ಆ ಬಾಕಿದಾರರ ಹೆಸರನ್ನು ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಿಂದ ತೆಗೆದುಹಾಕತಕ್ಕುದು:

ಪರಂತು, ಹಾಗೆ ತೆಗೆದುಹಾಕಲಾದ ಹೆಸರನ್ನು, ನವೀಕರಣ ಫೀಜನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಸಂದಾಯ ಮಾಡಿದ ಮೇಲೆ ಸದರಿ ರಿಜಿಸ್ಟರಿನಲ್ಲಿ ಪುನಃ ನಮೂದು ಮಾಡಬಹುದು.

(3) ನವೀಕರಣ ಫೀಜನ್ನು ಸಂದಾಯ ಮಾಡಿದ ತರುವಾಯ, ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ರಿಜಿಸ್ಟ್ರಾರನು ನವೀಕರಣ ಪ್ರಮಾಣಪತ್ರವನ್ನು ನೀಡತಕ್ಕುದು ಮತ್ತು ಅಂಥ ಪ್ರಮಾಣ ಪತ್ರವು ನೋಂದಣಿಯ ನವೀಕರಣದ ರುಜುವಾತಾಗಿರತಕ್ಕುದು.

**49. ರಿಜಿಸ್ಟರಿನಿಂದ ತೆಗೆದುಹಾಕುವುದು.**- (1) ಈ ಪ್ರಕರಣದ ಉಪಬಂಧಗಳಿಗೊಳಪಟ್ಟು, ರಾಜ್ಯ ಪಶು ವೈದ್ಯಕೀಯ ಪರಿಷತ್ತು, ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಲ್ಲಿ ಹೆಸರು ನಮೂದಾಗಿರುವ ಯಾರೇ ವ್ಯಕ್ತಿಗೆ ಅವನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ ಮತ್ತು ತಾನು ನಡೆಸುವುದು ಯುಕ್ತವೆಂದು ಯೋಚಿಸಬಹುದಾದಂಥ ಹೆಚ್ಚಿನ ವಿಚಾರಣೆಯನ್ನು ನಡೆಸಿದ ತರುವಾಯ,

(ಎ) ಅವನ ಹೆಸರು, ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಲ್ಲಿ ತಪ್ಪಿನಿಂದ ಅಥವಾ ತಪ್ಪು ನಿರೂಪಣೆಯಿಂದಾಗಿ ಅಥವಾ ಮುಖ್ಯ ಸಂಗತಿಗಳನ್ನು ಬಚ್ಚಿಟ್ಟಿದ್ದರಿಂದಾಗಿ ನಮೂದಾಗಿದೆಯೆಂದು;

(ಬಿ) ಅವನು, ಹಾಗೆ ನೈತಿಕ ಅಧಃಪತನವನ್ನೊಳಗೊಂಡ ಮತ್ತು ಕಾರಾವಾಸದಿಂದ ದಂಡನೀಯವಾದ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿದ್ದಾನೆ ಅಥವಾ ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ಅಭಿಪ್ರಾಯದಲ್ಲಿ ಅವನನ್ನು ಸದರಿ ರಿಜಿಸ್ಟರಿನಲ್ಲಿ ಉಳಿಸಿಕೊಳ್ಳಲಾಗದಂತೆ ಯಾವುದೇ ವೃತ್ತಿ ಗೌರವಕ್ಕೆ ಸಂಬಂಧಪಟ್ಟಂತೆ ಯಾವುದೇ ಹೇಯ ನಡತೆಯ ತಪ್ಪಿತಸ್ಥನಾಗಿದ್ದಾನೆ ಅಥವಾ ವೃತ್ತಿ ಸಂಬಂಧವಾದ ನಡತೆ ನಡವಳಿಕೆಯ ಅಥವಾ ನೀತಿ ಸಂಹಿತೆಯ ಮಾನದಂಡಗಳನ್ನು ಉಲ್ಲಂಘಿಸಿದ್ದಾನೆಂದು

- ಮನದಟ್ಟು ಮಾಡಿಕೊಂಡಿದ್ದರೆ ಅಂಥ ವ್ಯಕ್ತಿಯ ಹೆಸರನ್ನು ಆ ರಿಜಿಸ್ಟರಿನಿಂದ ತೆಗೆದುಹಾಕತಕ್ಕುದೆಂದು ಆದೇಶ ಮಾಡಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಆದೇಶವು, ಯಾವ ವ್ಯಕ್ತಿಯ ಹೆಸರನ್ನು ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಿಂದ ತೆಗೆದುಹಾಕಬೇಕೆಂದು ಆದೇಶಿಸಲಾಗಿದೆಯೋ ಆ ವ್ಯಕ್ತಿಯು ಶಾಶ್ವತವಾಗಿ ಅಥವಾ ನಿರ್ದಿಷ್ಟಪಡಿಸಬಹುದಾದಷ್ಟು ವರ್ಷಗಳ ಅವಧಿಯವರೆಗೆ ಈ ಅಧಿನಿಯಮದ ಮೇರೆಗೆ ನೋಂದಣಿಗೆ ಅನರ್ಹನಾಗತಕ್ಕುದೆಂದು ನಿರ್ದೇಶಿಸಬಹುದು.

(3) (1)ನೇ ಉಪಪ್ರಕರಣದ ಮೇರೆಗಿನ ಆದೇಶವು, ಆ ಆದೇಶದ ದಿನಾಂಕದಿಂದ ಅಥವಾ ಆದೇಶದ ಮೇಲಣ ಅಪೀಲು ಯಾವುದಾದರೂ ಇದ್ದರೆ ಅದನ್ನು ಅಂತಿಮವಾಗಿ ವಿಲೆ ಮಾಡಿದ

ದಿನಾಂಕದಿಂದ, ಇವೆರಡರಲ್ಲಿ ಯಾವುದು ನಂತರದ್ದೋ ಅಂದಿನಿಂದ ಮೂರು ತಿಂಗಳು ಮುಕ್ತಾಯವಾಗುವವರೆಗೆ ಪರಿಣಾಮಕಾರಿಯಾಗತಕ್ಕುದಲ್ಲ.

(4) (1)ನೇ ಉಪಪ್ರಕರಣದ ಮೇರೆಗಿನ ಆದೇಶದಿಂದ ಬಾಧಿತನಾದ ವ್ಯಕ್ತಿಯು, ಅಂಥ ಆದೇಶವನ್ನು ಅವನಿಗೆ ತಿಳಿಸಿದಂದಿನಿಂದ ಅರವತ್ತು ದಿವಸಗಳ ಒಳಗಾಗಿ ಪರಿಷತ್ತಿಗೆ ಅಪೀಲು ಸಲ್ಲಿಸಬಹುದು.

(5) (4)ನೇ ಉಪಪ್ರಕರಣದ ಮೇರೆಗಿನ ಪರಿಷತ್ತಿನ ತೀರ್ಮಾನದಿಂದ ಬಾಧಿತನಾದ ವ್ಯಕ್ತಿಯು ಅಂಥ ತೀರ್ಮಾನವನ್ನು ಅವನಿಗೆ ತಿಳಿಸಿದಂದಿನಿಂದ ಅರವತ್ತು ದಿವಸಗಳ ಒಳಗಾಗಿ ಕೇಂದ್ರ ಸರ್ಕಾರಕ್ಕೆ ಅಪೀಲು ಸಲ್ಲಿಸಬಹುದು.

(6) ಈ ಪ್ರಕರಣದ ಅಥವಾ 48ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಯಾವ ವ್ಯಕ್ತಿಯ ಹೆಸರನ್ನು ರಿಜಿಸ್ಟರಿನಿಂದ ತೆಗೆದುಹಾಕಲಾಗಿದೆಯೋ ಆ ವ್ಯಕ್ತಿಯು, ನೋಂದಣಿ ಪ್ರಮಾಣ ಪತ್ರವನ್ನು ಮತ್ತು ನವೀಕರಣ ಪ್ರಮಾಣ ಪತ್ರ ಯಾವುದಾದರೂ ಇದ್ದರೆ ಅದನ್ನು ಆ ಕೂಡಲೆ ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ರಿಜಿಸ್ಟ್ರಾರನಿಗೆ ಒಪ್ಪಿಸತಕ್ಕುದು ಮತ್ತು ಹಾಗೆ ತೆಗೆದುಹಾಕಲಾದ ಹೆಸರನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕುದು.

(7) ಈ ಪ್ರಕರಣದ ಅಥವಾ 48ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಯಾವ ವ್ಯಕ್ತಿಯ ಹೆಸರನ್ನು ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಿಂದ ತೆಗೆದುಹಾಕಲಾಗಿದೆಯೋ ಆ ವ್ಯಕ್ತಿಯು, ಯಾವ ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಿಂದ ಅವನ ಹೆಸರನ್ನು ತೆಗೆದುಹಾಕಲಾಗಿದೆಯೋ ಆ ಪರಿಷತ್ತಿನ ಅನುಮೋದನೆಯ ಹೊರತು, ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಲ್ಲಿ ಅಥವಾ ಯಾವುದೇ ಇತರ ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ನೋಂದಾಯಿಸಿಕೊಳ್ಳಲು ಅರ್ಹನಾಗತಕ್ಕುದಲ್ಲ.

**50. ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಲ್ಲಿ ಪುನಃ ನಮೂದು ಮಾಡುವುದು.–** ರಾಜ್ಯ ಪಶು ವೈದ್ಯಕೀಯ ಪರಿಷತ್ತು, ಅದಕ್ಕೆ ಸಾಕಷ್ಟೆಂದು ಕಂಡುಬಂದ ಕಾರಣಗಳಿಗಾಗಿ ಮತ್ತು ಪರಿಷತ್ತಿನ ಅನುಮೋದನೆಗೆ ಒಳಪಟ್ಟು ಯಾವುದೇ ಕಾಲದಲ್ಲಿ, ಇಪ್ಪತ್ತೈದು ರೂಪಾಯಿಗಳಿಗೆ ಮೀರದ ನಿಯಮಿಸಲಾದ ಫೀಜನ್ನು ಸಂದಾಯ ಮಾಡಿದ ಮೇಲೆ, ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಿಂದ ತೆಗೆದುಹಾಕಲಾದ ಯಾರೇ ವ್ಯಕ್ತಿಯ ಹೆಸರನ್ನು ಅದರಲ್ಲಿ ಪುನಃ ನಮೂದಿಸತಕ್ಕುದೆಂದು ಆದೇಶಿಸಬಹುದು.

**51. ರಾಜ್ಯ ಪಶು ವೈದ್ಯಕೀಯ ರಿಜಿಸ್ಟರನ್ನು ಮುದ್ರಿಸುವುದು.–** ಪ್ರತಿ ವರ್ಷದ ಏಪ್ರಿಲ್ 1ನೇ ದಿನಾಂಕದ ನಂತರ ಸಾಧ್ಯವಾದಷ್ಟು ಬೇಗನೆ, ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ರಿಜಿಸ್ಟ್ರಾರನು ಸದರಿ ದಿನಾಂಕದಂದು ಇದ್ದಂತೆ ಆ ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನ ಪ್ರತಿಗಳನ್ನು ಮುದ್ರಿಸುವ ವ್ಯವಸ್ಥೆ ಮಾಡತಕ್ಕುದು ಮತ್ತು ಅಂಥ ಪ್ರತಿಗಳನ್ನು ಹತ್ತು ರೂಪಾಯಿಗಳಿಗೆ ಮೀರದ ನಿಯಮಿಸಲಾದ ಬೆಲೆಯನ್ನು ಸಂದಾಯ ಮಾಡಿ ಅದನ್ನು ಕೋರುವವರಿಗೆ ದೊರೆಯುವಂತೆ ವ್ಯವಸ್ಥೆ ಮಾಡತಕ್ಕುದು ಮತ್ತು ಅಂಥ ಪ್ರತಿಗಳು ಸದರಿ ದಿನಾಂಕದಂದು ಅದರಲ್ಲಿ ಹೆಸರು ಸೇರಿಸಲಾದ ವ್ಯಕ್ತಿಗಳು ನೋಂದಾಯಿತ ಪಶು ವೈದ್ಯಕೀಯ ವೃತ್ತಿಗಾರರಾಗಿದ್ದರೆಂಬುದಕ್ಕೆ ಸಾಕ್ಷ್ಯವಾಗಿರತಕ್ಕುದು.

## ಅಧ್ಯಾಯ-VIII

### ಸಂಕೀರ್ಣ

**52. ನೋಂದಣಿಯ ವರ್ಗಾವಣೆ.–** ಒಂದು ರಾಜ್ಯದ ನೋಂದಾಯಿತ ಪಶು ವೈದ್ಯಕೀಯ ವೃತ್ತಿಗಾರನು ಇನ್ನೊಂದು ರಾಜ್ಯದಲ್ಲಿ ಪಶು ವೈದ್ಯಕೀಯ ವೃತ್ತಿಯನ್ನು ನಡೆಸುತ್ತಿದ್ದರೆ, ಅವನು ಅಂಥ ಇತರ ರಾಜ್ಯದಲ್ಲಿನ ನೋಂದಣಿ ನವೀಕರಣ ಫೀಜನ್ನು ಮೀರದಂಥ ನಿಯಮಿಸಲಾದ ಫೀಜನ್ನು ಸಂದಾಯ ಮಾಡಿ, ತನ್ನ ಹೆಸರು ಯಾವ ರಾಜ್ಯದಲ್ಲಿ ನೋಂದಾಯಿತವಾಗಿದೆಯೋ ಆ ರಾಜ್ಯದ ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಿಂದ ತನ್ನ ಹೆಸರನ್ನು ತಾನು ಪಶು ವೈದ್ಯಕೀಯ ವೃತ್ತಿಯನ್ನು ನಡೆಸುತ್ತಿರುವ ರಾಜ್ಯದ ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿಗೆ ವರ್ಗಾಯಿಸಬೇಕೆಂದು ಕೋರಿ ನಿಯಮಿಸಿದ ನಮೂನೆಯಲ್ಲಿ

ಪರಿಷತ್ತಿಗೆ ಅರ್ಜಿಯೊಂದನ್ನು ಸಲ್ಲಿಸಬಹುದು ಮತ್ತು ಯಾವುದೇ ಅಂಥ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಪರಿಷತ್ತು, ಈ ಅಧಿನಿಯಮದಲ್ಲಿ ಇನ್ನಾವುದೇ ಕಡೆಯಲ್ಲಿ ಏನೇ ಒಳಗೊಂಡಿದ್ದಾಗ್ಯೂ ಮೊದಲು ಹೇಳಿದ ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಿಂದ ಅಂಥ ವ್ಯಕ್ತಿಯ ಹೆಸರನ್ನು ತೆಗೆದುಹಾಕಬೇಕೆಂದು ಮತ್ತು ಎರಡನೆಯದಾಗಿ ಹೇಳಿದ ರಾಜ್ಯದ ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಲ್ಲಿ ನಮೂದಿಸಬೇಕೆಂದು ನಿರ್ದೇಶಿಸತಕ್ಕುದು ಮತ್ತು ಸಂಬಂಧಪಟ್ಟ ರಾಜ್ಯ ಪಶು ವೈದ್ಯಕೀಯ ಪರಿಷತ್ತುಗಳು ಅಂಥ ನಿರ್ದೇಶನವನ್ನು ಪಾಲಿಸತಕ್ಕುದು:

ಪರಂತು, ಅಂಥ ವ್ಯಕ್ತಿಯನ್ನು ತನ್ನ ನೋಂದಣಿಗೆ ಸಂಬಂಧಪಟ್ಟಂತೆ ಹಿಂದಿನ ರಾಜ್ಯದಲ್ಲಿ ಎಲ್ಲಾ ಬಾಕಿಗಳನ್ನು ಪಾವತಿ ಮಾಡಿದ ಬಗ್ಗೆ ಒಂದು ಪ್ರಮಾಣ ಪತ್ರವನ್ನು ಹಾಜರುಪಡಿಸುವಂತೆ ಅಗತ್ಯಪಡಿಸತಕ್ಕುದು:

ಮತ್ತೂ ಪರಂತು, ಯಾವ ಪಶು ವೈದ್ಯಕೀಯ ವೃತ್ತಿಗಾರನ ವಿರುದ್ಧ ಯಾವುದೇ ಶಿಸ್ತಿನ ವ್ಯವಹರಣೆಗಳು ಇತ್ಯರ್ಥದಲ್ಲಿರುವುದೋ ಅವನು ವರ್ಗಾವಣೆಗಾಗಿ ಅಂಥ ಯಾವುದೇ ಅರ್ಜಿಯನ್ನು ಸಲ್ಲಿಸಿದ್ದರೆ ಅಥವಾ ಇನ್ನಾವುದೇ ಕಾರಣದಿಂದ ವರ್ಗಾವಣೆಯ ಅರ್ಜಿಯು ವಾಸ್ತವಿಕತೆಯಿಂದ ಕೂಡಿಲ್ಲವೆಂದು ಮತ್ತು ವರ್ಗಾವಣೆಯನ್ನು ಮಾಡಕೂಡದೆಂದು ಪರಿಷತ್ತಿಗೆ ಕಂಡುಬಂದಲ್ಲಿ ಪರಿಷತ್ತು, ಪಶು ವೈದ್ಯಕೀಯ ವೃತ್ತಿಗಾರನಿಗೆ ಈ ಸಂಬಂಧ ತನ್ನ ಮನವಿಯನ್ನು ಸಲ್ಲಿಸಲು ಯುಕ್ತ ಅವಕಾಶವನ್ನು ನೀಡಿದ ತರುವಾಯ ಅಂಥ ಅರ್ಜಿಯನ್ನು ತಿರಸ್ಕರಿಸಬಹುದು.

**53. ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ.**- ರಿಜಿಸ್ಟರಿನಲ್ಲಿ ಹೆಸರನ್ನು ನಮೂದು ಮಾಡಲು ನಿರಾಕರಿಸುವ ಅಥವಾ ರಿಜಿಸ್ಟರಿನಿಂದ ಹೆಸರನ್ನು ತೆಗೆದುಹಾಕುವ ಯಾವುದೇ ಆದೇಶವನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕುದಲ್ಲ.

**54. ನಕಲು ಪ್ರಮಾಣಪತ್ರಗಳ ನೀಡಿಕೆ.**- ನೋಂದಣಿಯ ಪ್ರಮಾಣಪತ್ರವು ಅಥವಾ ನವೀಕರಿಸಿದ ಪ್ರಮಾಣ ಪತ್ರವು ಕಳೆದುಹೋಗಿದೆ ಎಂದು ಅಥವಾ ನಾಶವಾಗಿದೆ ಎಂದು ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ರಿಜಿಸ್ಟ್ರಾರನಿಗೆ ಮನದಟ್ಟಾಗುವಂತೆ ತೋರಿಸಿಕೊಟ್ಟರೆ, ಹತ್ತು ರೂಪಾಯಿಗಳಿಗೆ ಮೀರದ ನಿಯಮಿಸಲಾದ ಫೀಜನ್ನು ಪಾವತಿ ಮಾಡಿದ ನಂತರ, ರಿಜಿಸ್ಟ್ರಾರನು ನಿಯಮಿಸಿದ ನಮೂನೆಯಲ್ಲಿ ಆ ಪ್ರಮಾಣ ಪತ್ರದ ನಕಲನ್ನು ನೀಡತಕ್ಕುದು.

**55. ನೋಂದಾಯಿಸಲಾಗಿದೆ ಎಂದು ಸುಳ್ಳು ಕ್ಲೇಮು ಮಾಡಿದ್ದಕ್ಕೆ ದಂಡ.**- ಯಾವ ವ್ಯಕ್ತಿಯ ಹೆಸರನ್ನು ತತ್ಕಾಲದಲ್ಲಿ ಯಾವುದೇ ರಿಜಿಸ್ಟರಿನಲ್ಲಿ ನಮೂದಿಸಿಲ್ಲವೋ ಅಂಥ ಯಾರೇ ವ್ಯಕ್ತಿಯು, ಅದನ್ನು ಹಾಗೆ ನಮೂದಿಸಲಾಗಿದೆ ಎಂದು ಸುಳ್ಳಾಗಿ ಹೇಳಿದರೆ ಅಥವಾ ಅವನ ಹೆಸರಿನ ಅಥವಾ ಅಂಕಿತ ನಾಮದ ಜೊತೆಯಲ್ಲಿ ಯಾವುದೇ ಶಬ್ದಗಳನ್ನು, ಪದಗಳನ್ನು, ಅಕ್ಷರಗಳನ್ನು ಅವನ ಹೆಸರು ಹಾಗೆ ನೋಂದಾಯಿತವಾಗಿದೆ ಎಂಬ ಸಮಂಜಸ ಭಾವನೆ ಉಂಟಾಗುವ ಹಾಗೆ ಬಳಸಿದರೆ ಅವನು ಮೊದಲ ಅಪರಾಧ ನಿರ್ಣಯವಾದಾಗ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ತರುವಾಯದ ಯಾವುದೇ ಅಪರಾಧ ನಿರ್ಣಯವಾದಾಗ ಆರು ತಿಂಗಳಿಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳಿಗೆ ಮೀರದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕುದು.

**56. ಅಂಕಿತನಾಮಗಳ ದುರುಪಯೋಗ.**- ಯಾರೇ ವ್ಯಕ್ತಿಯು, -

(ಎ) ರಿಜಿಸ್ಟರಿನಲ್ಲಿ ನೋಂದಾಯಿತನಾಗಿಲ್ಲದ ವ್ಯಕ್ತಿಯಾಗಿದ್ದು, ಪಶು ವೈದ್ಯಕೀಯ ವೃತ್ತಿಗಾರನ ವರ್ಣನೆಯನ್ನು ಇಟ್ಟುಕೊಂಡರೆ ಅಥವಾ ಬಳಸಿದರೆ; ಅಥವಾ

(ಬಿ) ಮನ್ನಣೆ ಪಡೆದ ಪಶು ವೈದ್ಯಕೀಯ ವಿದ್ಯಾರ್ಹತೆ ಹೊಂದಿಲ್ಲದವನಾಗಿದ್ದು, ಪದವಿಯನ್ನು ಅಥವಾ ಡಿಪ್ಲೋಮಾವನ್ನು ಅಥವಾ ಲೈಸೆನ್ಸನ್ನು ಅಥವಾ ಅಂಥ ವಿದ್ಯಾರ್ಹತೆಯನ್ನು ಸೂಚಿಸುವ ಅಥವಾ ಇಂಗಿತಗೊಳಿಸುವ ಸಂಕೇತಾಕ್ಷರವನ್ನು ಬಳಸಿದರೆ

– ಅವನು ಮೊದಲ ಅಪರಾಧ ನಿರ್ಣಯಕ್ಕೆ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ತರುವಾಯ ಯಾವುದೇ ಅಪರಾಧ ನಿರ್ಣಯಕ್ಕೆ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳಿಗೆ ಮೀರದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

**57. ನೋಂದಾಯಿಸಿಲ್ಲದ ವ್ಯಕ್ತಿಗಳು ವೃತ್ತಿ ನಡೆಸಬಾರದು.**– (1) 45ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಗೊತ್ತುಪಡಿಸಿದ ದಿವಸದಿಂದ ಒಂದು ವರ್ಷ ಮುಕ್ತಾಯದ ತರುವಾಯ, ನೋಂದಣಿಯಾದ ಪಶು ವೈದ್ಯಕೀಯ ವೃತ್ತಿಗಾರನ ಹೊರತಾಗಿ ಅಥವಾ 30ನೇ ಪ್ರಕರಣದ (ಬಿ) ಖಂಡದ ಪರಂತುಕದ ಮೇರೆಗೆ ರಾಜ್ಯ ಸರ್ಕಾರವು ಅನುಮತಿಸಿದ ವ್ಯಕ್ತಿಯ ಹೊರತಾಗಿ ಯಾರೇ ವ್ಯಕ್ತಿಯು, ಆ ರಾಜ್ಯದಲ್ಲಿ ಸಂದರ್ಭಾನುಸಾರ ಪಶು ವೈದ್ಯಕೀಯ ವೃತ್ತಿಯನ್ನು ನಡೆಸತಕ್ಕುದಲ್ಲ ಅಥವಾ ಸಣ್ಣಪುಟ್ಟ ಪಶು ವೈದ್ಯಕೀಯ ಸೇವೆಗಳನ್ನು ಸಲ್ಲಿಸತಕ್ಕುದಲ್ಲ.

(2) ಯಾರೇ ವ್ಯಕ್ತಿ, (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ, ಅವನು ಮೊದಲ ಅಪರಾಧ ನಿರ್ಣಯಕ್ಕೆ ಒಂದು ಸಾವಿರ ರೂಪಾಯಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ತರುವಾಯದ ಯಾವುದೇ ಅಪರಾಧ ನಿರ್ಣಯಕ್ಕೆ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗೆ ಮೀರದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

**58. ನೋಂದಣಿ ಪ್ರಮಾಣ ಪತ್ರವನ್ನು ಮರಳಿ ಒಪ್ಪಿಸಲು ತಪ್ಪುವುದು.**– ರಿಜಿಸ್ಟರಿನಿಂದ ಯಾವ ವ್ಯಕ್ತಿಯ ಹೆಸರನ್ನು ತೆಗೆದುಹಾಕಲಾಗಿದೆಯೋ ಆ ಯಾವನೇ ವ್ಯಕ್ತಿಯು ತನ್ನ ನೋಂದಣಿ ಪ್ರಮಾಣ ಪತ್ರವನ್ನು ಅಥವಾ ನೋಂದಣಿ ನವೀಕರಣ ಪ್ರಮಾಣಪತ್ರವನ್ನು ಅಥವಾ ಅವೆರಡನ್ನೂ ಸಾಕಷ್ಟು ಕಾರಣವಿಲ್ಲದೆ, ಆ ಕೂಡಲೆ ಮರಳಿ ಒಪ್ಪಿಸಲು ತಪ್ಪಿದರೆ ಅವನು ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಅಪರಾಧವು ಮುಂದುವರಿದ ಸಂದರ್ಭದಲ್ಲಿ ಆ ಅಪರಾಧವು ಮುಂದುವರಿದ ಅವಧಿಯ ಮೊದಲ ದಿನದ ತರುವಾಯದ ದಿನವೊಂದಕ್ಕೆ ಹತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

**59. ಅಪರಾಧದ ಸಂಜ್ಞಾನ.**– ರಾಜ್ಯ ಸರ್ಕಾರವು ಅಥವಾ ರಾಜ್ಯ ಪಶು ವೈದ್ಯಕೀಯ ಪರಿಷತ್ತು ಆದೇಶದ ಮೂಲಕ ದೂರು ಸಲ್ಲಿಸಿದ ಹೊರತು ಯಾವುದೇ ನ್ಯಾಯಾಲಯವು, ಈ ಅಧಿನಿಯಮದ ಮೇರೆಗಿನ ಯಾವುದೇ ದಂಡನೀಯ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕುದಲ್ಲ.

**60. ದಾವೆಗೆ ಮತ್ತು ಇತರ ಕಾನೂನು ವ್ಯವಹರಣೆಗೆ ಪ್ರತಿಷೇಧ.**– ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ನಿಯಮಗಳು, ವಿನಿಯಮಗಳು ಅಥವಾ ಆದೇಶಗಳಿಗೆ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಪರಿಷತ್ತಿನ ಅಥವಾ ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ವಿರುದ್ಧ ಯಾವುದೇ ದಾವೆಗೆ ಅಥವಾ ಇತರ ಕಾನೂನು ವ್ಯವಹರಣೆಗಳಿಗೆ ಅವಕಾಶವಿರತಕ್ಕುದಲ್ಲ.

**61. ಪರಿಷತ್ತಿನ ಫೀಜುಗಳ ಭಾಗವನ್ನು ಸಂದಾಯ ಮಾಡುವುದು.**– ರಾಜ್ಯ ಪಶು ವೈದ್ಯಕೀಯ ಪರಿಷತ್ತು, ಪ್ರತಿ ವರ್ಷದ ಜೂನ್ ತಿಂಗಳ ಮುಕ್ತಾಯಕ್ಕೆ ಮೊದಲು, ಆ ವರ್ಷದ ಮಾರ್ಚ್ 31ನೇ ದಿನಾಂಕಕ್ಕೆ ಕೊನೆಗೊಳ್ಳುವ ಹನ್ನೆರಡು ತಿಂಗಳ ಅವಧಿಯಲ್ಲಿ ಈ ಅಧಿನಿಯಮದ ಮೇರೆಗೆ ರಾಜ್ಯ ಪಶು ವೈದ್ಯಕೀಯ ಪರಿಷತ್ತಿಗೆ ಬಂದ ಒಟ್ಟು ಫೀಜುಗಳ ಕಾಲುಭಾಗಕ್ಕೆ ಸಮನಾದ ಮೊತ್ತವನ್ನು ಪರಿಷತ್ತಿಗೆ ಸಂದಾಯ ಮಾಡತಕ್ಕುದು.

**62. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.**– (1) ಪರಿಷತ್ತು, ಕೇಂದ್ರ ಸರ್ಕಾರವು, ಭಾರತದ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕರೊಂದಿಗೆ ಸಮಾಲೋಚನೆ ನಡೆಸಿ, ಹೊರಡಿಸಬಹುದಾದಂಥ

ಸಾಮಾನ್ಯ ನಿರ್ದೇಶನಗಳಿಗನುಸಾರವಾಗಿ ಮತ್ತು ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ ಸರಿಯಾದ ಲೆಕ್ಕಪತ್ರಗಳನ್ನು ಮತ್ತು ಸಂಬಂಧಪಟ್ಟ ಇತರ ದಾಖಲೆಗಳನ್ನು ಇಡತಕ್ಕುದು, ಮತ್ತು ಜಮಾಖರ್ಚು ಪಟ್ಟಿಯೂ ಸೇರಿ ಲೆಕ್ಕಪತ್ರಗಳ ವಾರ್ಷಿಕ ವಿವರಣೆಯನ್ನು ತಯಾರಿಸತಕ್ಕುದು.

(2) ಪರಿಷತ್ತಿನ ಲೆಕ್ಕಪತ್ರಗಳನ್ನು ಭಾರತದ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ಅಥವಾ ಅವರು ಈ ಸಂಬಂಧದಲ್ಲಿ ನೇಮಿಸಬಹುದಾದಂಥ ಯಾರೇ ವ್ಯಕ್ತಿಯು ಪ್ರತಿ ವರ್ಷ ಪರಿಶೋಧಿಸತಕ್ಕುದು ಮತ್ತು ಅಂಥ ಲೆಕ್ಕಪರಿಶೋಧನೆಗೆ ಸಂಬಂಧಪಟ್ಟಂತೆ ಅವರು ಅಥವಾ ಹಾಗೆ ನೇಮಕಗೊಂಡ ಯಾರೇ ವ್ಯಕ್ತಿಯು ವಹಿಸಿದ ಯಾವುದೇ ವೆಚ್ಚವನ್ನು ಪರಿಷತ್ತು ಭಾರತದ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕರಿಗೆ ಸಂದಾಯ ಮಾಡತಕ್ಕುದು.

(3) ಭಾರತದ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕರು, ಮತ್ತು ಪರಿಷತ್ತಿನ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗೆ ಸಂಬಂಧಪಟ್ಟಂತೆ ಅವರು ನೇಮಕ ಮಾಡಿದ ಯಾರೇ ವ್ಯಕ್ತಿಯು, ಭಾರತದ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕರು, ಸರ್ಕಾರದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗೆ ಸಂಬಂಧಪಟ್ಟಂತೆ ಯಾವ ಹಕ್ಕುಗಳನ್ನು ಮತ್ತು ವಿಶೇಷಾಧಿಕಾರಗಳನ್ನು ಮತ್ತು ಅಧಿಕಾರವನ್ನು ಹೊಂದಿರುವರೋ ಅದೇ ಬಗೆಯ ಹಕ್ಕುಗಳನ್ನು ಮತ್ತು ವಿಶೇಷಾಧಿಕಾರಗಳನ್ನು ಹಾಗೂ ಅಧಿಕಾರವನ್ನು ಅಂಥ ಲೆಕ್ಕಪರಿಶೋಧನೆಗೆ ಸಂಬಂಧಪಟ್ಟಂತೆಯೂ ಹೊಂದಿರತಕ್ಕುದು ಮತ್ತು ನಿರ್ದಿಷ್ಟವಾಗಿ ಲೆಕ್ಕದ ಪುಸ್ತಕಗಳನ್ನು, ಸಂಬಂಧಪಟ್ಟ ವೋಚರುಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಮತ್ತು ಕಾಗದ ಪತ್ರಗಳನ್ನು ಹಾಜರುಪಡಿಸುವಂತೆ ಒತ್ತಾಯಿಸುವ ಮತ್ತು ಪರಿಷತ್ತಿನ ಕಛೇರಿಯನ್ನು ಪರಿಶೀಲಿಸುವ ಹಕ್ಕನ್ನು ಹೊಂದಿರತಕ್ಕುದು.

(4) ಭಾರತದ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕರು, ಅವರು ಈ ಸಂಬಂಧವಾಗಿ ನೇಮಕ ಮಾಡಿದ ಯಾವನೇ ವ್ಯಕ್ತಿಯು ಪ್ರಮಾಣಿಸಿದ ಪರಿಷತ್ತಿನ ಲೆಕ್ಕಪತ್ರಗಳನ್ನು ಅದರ ಮೇಲಣ ಲೆಕ್ಕಪರಿಶೋಧನೆಯ ವರದಿಯೊಂದಿಗೆ ಕೇಂದ್ರ ಸರ್ಕಾರಕ್ಕೆ ಪ್ರತಿ ವರ್ಷವೂ ಕಳುಹಿಸಿ ಕೊಡತಕ್ಕುದು ಮತ್ತು ಆ ಸರ್ಕಾರವು ಅದನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವ ವ್ಯವಸ್ಥೆ ಮಾಡತಕ್ಕುದು.

(5) ಹಾಗೆ ಪ್ರಮಾಣಿಕರಿಸಲಾದ ಪರಿಷತ್ತಿನ ಲೆಕ್ಕಪತ್ರಗಳ ಒಂದು ಪ್ರತಿಯನ್ನು ಅದರ ಮೇಲಣ ಲೆಕ್ಕಪರಿಶೋಧನೆಯ ವರದಿಯೊಂದಿಗೆ ಪರಿಷತ್ತಿಗೆ ಅದೇ ಕಾಲಕ್ಕೆ ಕಳುಹಿಸತಕ್ಕುದು.

**63. ವಿಚಾರಣಾ ಆಯೋಗದ ನೇಮಕ.**- (1) ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಪರಿಷತ್ತು ಪಾಲಿಸುತ್ತಿಲ್ಲವೆಂದು ಕೇಂದ್ರ ಸರ್ಕಾರಕ್ಕೆ ಕಂಡುಬಂದಾಗಲೆಲ್ಲ, ಕೇಂದ್ರ ಸರ್ಕಾರವು ಮೂವರು ವ್ಯಕ್ತಿಗಳನ್ನೊಳಗೊಂಡ ಒಂದು ವಿಚಾರಣಾ ಆಯೋಗವನ್ನು ನೇಮಕ ಮಾಡಬಹುದು ಮತ್ತು ಅವರಲ್ಲಿ ಇಬ್ಬರನ್ನು ಕೇಂದ್ರ ಸರ್ಕಾರವು ನೇಮಕ ಮಾಡತಕ್ಕುದು, ಆ ಪೈಕಿ ಒಬ್ಬರು ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರತಕ್ಕುದು ಮತ್ತು ಪರಿಷತ್ತು ಇನ್ನೊಬ್ಬರನ್ನು ನೇಮಕ ಮಾಡತಕ್ಕುದು, ಮತ್ತು ಆ ಆಯೋಗಕ್ಕೆ ವಿಚಾರಣೆಯಾಗಬೇಕಾದ ವಿಷಯವನ್ನು ಒಪ್ಪಿಸತಕ್ಕುದು.

(2) ಆಯೋಗವು ಅದಕ್ಕೆ ಒಪ್ಪಿಸಿದ ವಿಷಯಗಳ ಬಗ್ಗೆ ಸಂಕ್ಷಿಪ್ತ ರೀತಿಯಲ್ಲಿ ವಿಚಾರಣೆ ನಡೆಸಿದ ತರುವಾಯ ಆ ಬಗೆಗಿನ ವರದಿಯನ್ನು ತಾನು ಶಿಫಾರಸು ಮಾಡಬಹುದಾದ ಪರಿಹಾರೋಪಾಯಗಳೇನಾದರೂ ಇದ್ದರೆ ಅವುಗಳೊಂದಿಗೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕುದು.

(3) ಕೇಂದ್ರ ಸರ್ಕಾರವು, ಆ ವರದಿಯನ್ನು ಒಪ್ಪಿಕೊಳ್ಳಬಹುದು ಅಥವಾ ಅದನ್ನು ಮಾರ್ಪಾಡಿಗಾಗಿ ಅಥವಾ ಪುನರ್ ಪರಿಶೀಲನೆಗಾಗಿ ಆಯೋಗಕ್ಕೆ ಕಳುಹಿಸಬಹುದು.

(4) ವರದಿಯನ್ನು ಅಂತಿಮವಾಗಿ ಒಪ್ಪಿಕೊಂಡ ತರುವಾಯ, ಕೇಂದ್ರ ಸರ್ಕಾರವು, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಮಯದೊಳಗೆ ಹಾಗೆ ಶಿಪಾರಸ್ಸು ಮಾಡಲಾದಂಥ ಪರಿಹಾರೋಪಾಯವನ್ನು ಅಳವಡಿಸಲು ಪರಿಷತ್ತಿಗೆ ಆದೇಶ ನೀಡಬಹುದು, ಮತ್ತು ಪರಿಷತ್ತು ನಿರ್ದಿಷ್ಟಪಡಿಸಿದ ಸಮಯದೊಳಗೆ ಅದನ್ನು ಪಾಲಿಸಲು ತಪ್ಪಿದರೆ, ಕೇಂದ್ರ ಸರ್ಕಾರವು, ಆಯೋಗದ

ಶಿಫಾರಸ್ಸುಗಳನ್ನು ಜಾರಿಗೊಳಿಸಲು ಅವಶ್ಯವಾಗಬಹುದಾದಂಥ ಆದೇಶವನ್ನು ಮಾಡಬಹುದು ಅಥವಾ ಅಂಥ ಕ್ರಮವನ್ನು ಕೈಗೊಳ್ಳಬಹುದು.

(5) ರಾಜ್ಯ ಪಶು ವೈದ್ಯಕೀಯ ಪರಿಷತ್ತು ಈ ಅಧಿನಿಯಮದ ಉಪಬಂಧಗಳಲ್ಲಿ ಯಾವುವೇ ಉಪಬಂಧವನ್ನು ಪಾಲಿಸುತ್ತಿಲ್ಲವೆಂದು ರಾಜ್ಯ ಸರ್ಕಾರಕ್ಕೆ ಕಂಡುಬಂದಾಗಲೆಲ್ಲ, ಅದು ರಾಜ್ಯ ಪಶು ವೈದ್ಯಕೀಯ ಪರಿಷತ್ತಿಗೆ ಸಂಬಂಧಪಟ್ಟಂತೆ ಅದೇ ರೀತಿಯ ವಿಚಾರಣೆ ನಡೆಸುವ ಬಗ್ಗೆ ಅಂಥದೇ ವಿಚಾರಣಾ ಆಯೋಗವನ್ನು ನೇಮಿಸಬಹುದು, ಮತ್ತು (3) ಮತ್ತು (4)ನೇ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದಂಥ ಆದೇಶವನ್ನು ಮಾಡಬಹುದು ಅಥವಾ ಅಂಥ ಕ್ರಮವನ್ನು ಕೈಗೊಳ್ಳಬಹುದು.

**64. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ.**- (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ, ಅಧಿಸೂಚನೆ ಹೊರಡಿಸಿ II, III, IV ಮತ್ತು V ಈ ಅಧ್ಯಾಯಗಳ ಉದ್ದೇಶಗಳ ಜಾರಿಗಾಗಿ ನಿಯಮಗಳ ರಚನೆ ಮಾಡಬಹುದು.

(2) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರದಿಂದ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಉಭಯ ಸದನಗಳ ಮುಂದೆ, ಅದು ಅಧಿವೇಶನದಲ್ಲಿರುವಾಗ ಅದರ ಒಂದು ಅಧಿವೇಶನದಲ್ಲಿ ಅಥವಾ ಒಂದಾದಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳವರೆಗೆ ಮಂಡಿಸತಕ್ಕುದು ಮತ್ತು ಮೇಲೆ ಹೇಳಲಾದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೇ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕುದು ಅಥವಾ ಪರಿಣಾಮಕಾರಿಯಾಗತಕ್ಕುದಲ್ಲ; ಆದರೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಅಂಥ ನಿಯಮದ ಮೇರೆಗೆ ಆ ಹಿಂದೆ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕುದಲ್ಲ.

**65. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ.**- (1) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ, ಅಧಿಸೂಚನೆ ಹೊರಡಿಸಿ VI, VII ಮತ್ತು VIII ಈ ಅಧ್ಯಾಯಗಳ ಉದ್ದೇಶಗಳ ಜಾರಿಗಾಗಿ ನಿಯಮಗಳ ರಚನೆ ಮಾಡಬಹುದು.

(2) ನಿರ್ದಿಷ್ಟವಾಗಿ ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:-

(ಎ) 36ನೇ ಪ್ರಕರಣದ ಮೇರೆಗೆ ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ಅಧ್ಯಕ್ಷರನ್ನು ಚುನಾಯಿಸತಕ್ಕ ರೀತಿ;

(ಬಿ) VI ನೇ ಅಧ್ಯಾಯದ ಮೇರೆಗಿನ ಚುನಾವಣೆಯನ್ನು ನಡೆಸತಕ್ಕ ರೀತಿ;

(ಸಿ) 38ನೇ ಪ್ರಕರಣದ 6ನೇ ಉಪಪ್ರಕರಣದ ಮೇರೆಗೆ ರಾಜ್ಯ ಪಶು ವೈದ್ಯಕೀಯ ಪರಿಷತ್ತು ತನ್ನ ಸಭೆಗಳಲ್ಲಿ ಪಾಲಿಸಬೇಕಾದ ಪ್ರಕ್ರಿಯೆ;

(ಡಿ) 40ನೇ ಪ್ರಕರಣದ ಮೇರೆಗೆ ಕಾರ್ಯ ನಿರ್ವಾಹಕ ಸಮಿತಿಯ ಮತ್ತು ಇತರ ಸಮಿತಿಗಳ ರಚನೆಗೆ ಸಂಬಂಧಿಸಿದ ಷರತ್ತುಗಳು ಮತ್ತು ನಿರ್ಬಂಧಗಳು;

(ಇ) ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ಮತ್ತು ಸಮಿತಿಗಳ 41ನೇ ಪ್ರಕರಣದ ಮೇರೆಗಿನ ಸಭೆಗಳಲ್ಲಿ ಹಾಜರಾತಿಗಾಗಿ ಫೀಜುಗಳು ಮತ್ತು ಭತ್ಯೆಗಳು;

(ಎಫ್) 42ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ರಾಜ್ಯ ಪಶು ವೈದ್ಯಕೀಯ ಪರಿಷತ್ತಿನ ರಿಜಿಸ್ಟ್ರಾರ್‌ರ, ಇತರ ಅಧಿಕಾರಿಗಳ ಮತ್ತು ನೌಕರರ ನೇಮಕಾತಿಯ ನಿಬಂಧನೆಗಳು ಮತ್ತು ಷರತ್ತುಗಳು;

(ಜಿ) 44ನೇ ಪ್ರಕರಣದ (4)ನೇ ಉಪಪ್ರಕರಣದ (ಇ) ಖಂಡದ ಮೇರೆಗೆ ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನಲ್ಲಿ ಸೇರಿಸಬೇಕಾದ ವಿವರಗಳು;

(ಹೆಚ್) 45ನೇ ಪ್ರಕರಣದ (2)ನೇ ಉಪಪ್ರಕರಣದ ಮತ್ತು 47ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯ ಜೊತೆಗೆ ಸಲ್ಲಿಸಬೇಕಾದ ಫೀಜುಗಳು;

(ಐ) 45ನೇ ಪ್ರಕರಣದ (5)ನೇ ಉಪಪ್ರಕರಣದ ಮತ್ತು 47ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗಿನ ನೋಂದಣಿ ಪ್ರಮಾಣ ಪತ್ರದ ನಮೂನೆ;

(ಜೆ) 46ನೇ ಪ್ರಕರಣದ, 50ನೇ ಪ್ರಕರಣದ, 52ನೇ ಪ್ರಕರಣದ ಮತ್ತು 54ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಫೀಜು;

(ಕೆ) 48ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ನವೀಕರಣ ಫೀಜು;

(ಎಲ್) 48ನೇ ಪ್ರಕರಣದ (2)ನೇ ಉಪಪ್ರಕರಣದ ಪರಂತುಕದ ಮೇರೆಗಿನ ನವೀಕರಣ ಫೀಜನ್ನು ಸಂದಾಯ ಮಾಡುವ ರೀತಿ;

(ಎಂ) 51ನೇ ಪ್ರಕರಣದ ಮೇರೆಗೆ ರಾಜ್ಯ ಪಶು ವೈದ್ಯಕೀಯ ರಿಜಿಸ್ಟರಿನ ಮುದ್ರಿತ ಪ್ರತಿಗಳ ಸರಬರಾಜಿಗಾಗಿ ಚಾರ್ಜು;

(ಎನ್) 54ನೇ ಪ್ರಕರಣದ ಮೇರೆಗಿನ ನಕಲು ಪ್ರಮಾಣ ಪತ್ರದ ನಮೂನೆ;

(ಓ) VI, VII, ಮತ್ತು VIII ಈ ಅಧ್ಯಾಯಗಳ ಮೇರೆಗೆ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯಗಳು.

(3) ಈ ಪ್ರಕರಣದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲವು ಎರಡು ಸದನಗಳನ್ನು ಒಳಗೊಂಡಿರುವಲ್ಲಿ ಅದರ ಪ್ರತಿಯೊಂದು ಸದನದ ಮುಂದೆ ಅಥವಾ ಅಂಥ ವಿಧಾನ ಮಂಡಲವು ಒಂದು ಸದನವನ್ನು ಒಳಗೊಂಡಿರುವಲ್ಲಿ ಆ ಸದನದ ಮುಂದೆ ಮಂಡಿಸತಕ್ಕುದು.

**66. ವಿನಿಯಮ ರಚನಾಧಿಕಾರ.**- (1) ಪರಿಷತ್ತು, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದು, II, III, IV ಮತ್ತು V ಈ ಅಧ್ಯಾಯಗಳ ಉದ್ದೇಶಗಳನ್ನು ಜಾರಿಗೊಳಿಸಲು ಈ ಅಧಿನಿಯಮದ ಮತ್ತು 64ನೇ ಪ್ರಕರಣದ ಮೇರೆಗೆ ರಚಿಸಲಾದ ನಿಯಮಗಳ ಉಪಬಂಧಗಳಿಗೆ ಅಸಂಗತವಾಗದಂತೆ ವಿನಿಯಮಗಳನ್ನು ಮಾಡಬಹುದು.

(2) ನಿರ್ದಿಷ್ಟವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಿಲ್ಲದಂತೆ, ಅಂಥ ವಿನಿಯಮಗಳನ್ನು ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:-

(ಎ) 3ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಅಧ್ಯಕ್ಷರನ್ನು ಮತ್ತು ಉಪಾಧ್ಯಕ್ಷರನ್ನು ಚುನಾಯಿಸುವ ರೀತಿ;

(ಬಿ) 9ನೇ ಪ್ರಕರಣದ (6)ನೇ ಉಪಪ್ರಕರಣದ ಮತ್ತು 12ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಪರಿಷತ್ತು ಮತ್ತು ಸಮಿತಿಗಳು ತಮ್ಮ ಸಭೆಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ;

(ಸಿ) 11ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಪರಿಷತ್ತಿನ ಕಾರ್ಯದರ್ಶಿಯ, ಇತರ ಅಧಿಕಾರಿಗಳ ಮತ್ತು ನೌಕರರ ನೇಮಕಾತಿಯ ನಿಬಂಧನೆಗಳು ಮತ್ತು ಷರತ್ತುಗಳು;

(ಡಿ) 13ನೇ ಪ್ರಕರಣದ ಮೇರೆಗೆ ಪರಿಷತ್ತಿನ ಮತ್ತು ಸಮಿತಿಗಳ ಸಭೆಗಳಲ್ಲಿ ಹಾಜರಾತಿಗಾಗಿ ಫೀಜುಗಳು ಮತ್ತು ಭತ್ಯೆಗಳು;

(ಇ) 23ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಭಾರತೀಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರನ್ನು ಇಡತಕ್ಕ ನಮೂನೆ ಮತ್ತು ರೀತಿ;

(ಎಫ್) 23ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಭಾರತೀಯ ಪಶು ವೈದ್ಯಕೀಯ ವೃತ್ತಿಗಾರರ ರಿಜಿಸ್ಟರನ್ನು ಇಡತಕ್ಕ ರೀತಿ;

(ಜಿ) 24ನೇ ಪ್ರಕರಣದ ಮೇರೆಗೆ ಸಲ್ಲಿಸಬಹುದಾದ ಅರ್ಜಿಯ ನಮೂನೆ ಮತ್ತು ರೀತಿ;

(ಹೆಚ್) 25ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ಅರ್ಜಿಯ ನಮೂನೆ ಮತ್ತು ಸಂದಾಯ ಮಾಡಬೇಕಾದ ಫೀಜು;

(ಐ) 25ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ನೋಂದಣಿಯ ಪ್ರಮಾಣಪತ್ರದ ನಮೂನೆ;

(ಜೆ) 25ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಫೀಜು;

(ಕೆ) 25ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗಿನ ನಕಲು ಪ್ರಮಾಣಪತ್ರದ ನಮೂನೆ;

(ಎಲ್) 26ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಬಹುದಾದ ಅರ್ಜಿಯ ನಮೂನೆ ಮತ್ತು ರೀತಿ ಮತ್ತು ಆ ಬಗ್ಗೆ ಸಂದಾಯ ಮಾಡಬೇಕಾದ ಫೀಜು;

(ಎಂ) 31ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪಶು ವೈದ್ಯಕೀಯ ವೃತ್ತಿಗಾರರು ಪಾಲಿಸಬೇಕಾದ ವೃತ್ತಿ ನಡತೆ ಮತ್ತು ನಡವಳಿಕೆಗಳ ಗುಣಮಟ್ಟಗಳು ಮತ್ತು ನೀತಿ ಸಂಹಿತೆ;

(ಎನ್) ವಿನಿಯಮಗಳ ಮೂಲಕ ಈ ಅಧಿನಿಯಮದ ಮೇರೆಗೆ ಉಪಬಂಧಿಸಬಹುದಾದ ಯಾವುದೇ ಇತರ ವಿಷಯ.

(3) ಪರಿಷತ್ತು ಪ್ರತಿಯೊಂದು ವಿನಿಯಮವನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು ಮತ್ತು ಆ ಸರ್ಕಾರವು ಅದರ ಪ್ರತಿಯೊಂದನ್ನು ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಮಂಡಿಸತಕ್ಕುದು ಮತ್ತು ಹಿಂದೆ ಹೇಳಲಾದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಬರುವ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ವಿನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ವಿನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ವಿನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕುದು ಅಥವಾ ಪರಿಣಾಮಕಾರಿಯಾಗತಕ್ಕುದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಅಂಥ ವಿನಿಯಮದ ಮೇರೆಗೆ ಆ ಹಿಂದೆ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕುದಲ್ಲ.

**67. ನಿರಸನ ಮತ್ತು ಉಳಿಸುವಿಕೆ.-** ಯಾವುದೇ ರಾಜ್ಯದಲ್ಲಿ ಈ ಅಧಿನಿಯಮದ ಪ್ರಾರಂಭದಿಂದ, ಈ ಅಧಿನಿಯಮದಲ್ಲಿ ಒಳಗೊಂಡಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿದ್ದು ಆ ರಾಜ್ಯದಲ್ಲಿ ಜಾರಿಯಲ್ಲಿರುವ ಪ್ರತಿಯೊಂದು ಇತರ ಅಧಿನಿಯಮವು ಆ ಅಧಿನಿಯಮದಲ್ಲಿ ಅಥವಾ ಅದರಲ್ಲಿ ಒಳಗೊಂಡ ಯಾವುದೇ ಉಪಬಂಧವು ಈ ಅಧಿನಿಯಮಕ್ಕೆ ಅಥವಾ ಈ ಅಧಿನಿಯಮದಲ್ಲಿ ಒಳಗೊಂಡ ಯಾವುದೇ ಉಪಬಂಧಕ್ಕೆ ಸಂವಾದಿಯಾಗಿರುವಷ್ಟರ ಮಟ್ಟಿಗೆ ಅಥವಾ ವಿರುದ್ಧವಾಗಿರುವಷ್ಟು ಮಟ್ಟಿಗೆ ನಿರಸನಗೊಂಡಿರತಕ್ಕುದು ಮತ್ತು ಸಾಮಾನ್ಯ ಖಂಡಗಳ ಅಧಿನಿಯಮ, 1897ರ 6ನೇ ಪ್ರಕರಣದ ಉಪಬಂಧಗಳು ಅಂಥ ಇತರ ಅಧಿನಿಯಮವು ಕೇಂದ್ರ ಅಧಿನಿಯಮವಾಗಿದ್ದರೆ ಹೇಗೋ ಹಾಗೆ ಅಂಥ ನಿರಸನಕ್ಕೆ ಅನ್ವಯವಾಗತಕ್ಕುದು.

## ಮೊದಲನೇ ಅನುಸೂಚಿ

[2 (ಇ) ಪ್ರಕರಣ ಮತ್ತು 15ನೇ ಪ್ರಕರಣ ನೋಡಿ]

## ಭಾರತದಲ್ಲಿ ವಿಶ್ವವಿದ್ಯಾನಿಲಯಗಳು ಮತ್ತು ಪಶು ವೈದ್ಯಕೀಯ ಸಂಸ್ಥೆಗಳು ಪ್ರದಾನ ಮಾಡುವ ಮನ್ನಣೆ ಪಡೆದ ಪಶು ವೈದ್ಯಕೀಯ ಅರ್ಹತೆಗಳು

| ವಿಶ್ವವಿದ್ಯಾನಿಲಯ ಅಥವಾ ಪಶು ವೈದ್ಯಕೀಯ ಸಂಸ್ಥೆಗಳು | ಮನ್ನಣೆ ಪಡೆದ ಪಶು ವೈದ್ಯಕೀಯ ಅರ್ಹತೆ | ನೋಂದಣಿಗಾಗಿನ ಸಂಕೇತಾಕ್ಷರಗಳು |
|---|---|---|
| 1 | 2 | 3 |
| ಪದವಿಗಳು | | |
| 1. ಆಗ್ರಾ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಸಿ. ಮತ್ತು ಎ.ಹೆಚ್ |
| 2. ಆಂಧ್ರ ಪ್ರದೇಶ ಕೃಷಿ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಪದವಿ | ಬಿ.ವಿ.ಎಸ್ಸಿ |
| | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 3. ಅಸ್ಸಾಂ ಕೃಷಿ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 4. ಬಿಧಾನ್‌ಚಂದ್ರ ಕೃಷಿ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 5. ಬಿಹಾರ್ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 6. ಬಾಂಬೆ ವಿಶ್ವವಿದ್ಯಾನಿಲಯ | ವಿಜ್ಞಾನ (ಪಶು) ಪದವಿ | ಬಿ.ಎಸ್ಸಿ (ಪಶು) |
| | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| | ಪಶು ವೈದ್ಯಕೀಯ ವಿಜ್ಞಾನ ಪದವಿ | ಬಿ.ವಿ.ಎಸ್ಸಿ |
| 7. ಕಲ್ಕತ್ತ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಪದವಿ | ಬಿ.ವಿ.ಎಸ್ಸಿ ಬಿ.ವಿ.ಎಸ್ಸಿ |
| | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್.ಸಿ. ಮತ್ತು ಎ.ಹೆಚ್. |
| 8. ಕ್ಯಾಲಿಕಟ್ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಪದವಿ | ಬಿ.ವಿ.ಎಸ್ಸಿ |
| 9. ಚಂದ್ರಶೇಖರ್ ಅಜಾದ್ ಕೃಷಿ ಮತ್ತು ತಂತ್ರಜ್ಞಾನದ ವಿಶ್ವ ವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 10. ಗೌಹಾಟಿ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 11. ಗೋವಿಂದ ವಲ್ಲಭಪಂತ ಕೃಷಿ ಮತ್ತು ತಂತ್ರಜ್ಞಾನದ ವಿಶ್ವ ವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 12. ಗುಜರಾತ್ ಕೃಷಿ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 13. ಹರಿಯಾಣ ಕೃಷಿ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ವಿಜ್ಞಾನ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| | ಪಶು ವೈದ್ಯಕೀಯ ವಿಜ್ಞಾನ ಪದವಿ | ಬಿ.ವಿ.ಎ.ಎಸ್ಸಿ |

| | | |
|---|---|---|
| 14. ಜಬ್ಬಲ್‌ಪುರ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಪದವಿ | ಬಿ.ವಿ.ಎಸ್ಸಿ |
| ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. | |
| 15. ಜವಹರ್‌ಲಾಲ್ ನೆಹರು ಕೃಷಿ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 16. ಕೇರಳ ಕೃಷಿ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| | ಪಶು ವೈದ್ಯಕೀಯ ವಿಜ್ಞಾನ ಪದವಿ | ಬಿ.ವಿ.ಎಸ್ಸಿ |
| 17. ಕೇರಳ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಪದವಿ | ಬಿ.ವಿ.ಎಸ್ಸಿ |
| 18. ಕೊಂಕಣ ಕೃಷಿ ವಿದ್ಯಾಪೀಠ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 19. ಮದ್ರಾಸ್ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಪದವಿ | ಬಿ.ವಿ.ಎಸ್ಸಿ |
| 20. ಮಗಧ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 21. ಮಹಾರಾಷ್ಟ್ರ ಕೃಷಿ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 22. ಮಹಾತ್ಮ ಫುಲೆ ಕೃಷಿ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಪದವಿ | ಬಿ.ವಿ.ಎಸ್ಸಿ |
| | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 23. ಮರಾಠಾವಾಡ ಕೃಷಿ ವಿದ್ಯಾಪೀಠ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 24. ಮೈಸೂರು ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಪದವಿ | ಬಿ.ವಿ.ಎಸ್ಸಿ |
| 25. ನಾಗಪುರ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್ |
| | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ (ಪಶು) |
| | ವಿಜ್ಞಾನ ಪದವಿ (ಪಶು) | |
| 26. ಒರಿಸ್ಸಾ ಕೃಷಿ ಮತ್ತು ತಂತ್ರ ಜ್ಞಾನ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 27. ಉಸ್ಮಾನಿಯಾ ವಿಶ್ವ ವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಪದವಿ | ಬಿ.ವಿ.ಎಸ್ಸಿ |
| | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 28. ಪಂಜಾಬ್ ವಿಶ್ವವಿದ್ಯಾನಿಲಯ ಲಾಹೋರ್ (1942– ಆಗಸ್ಟ್ 1947) | ಪಶು ವೈದ್ಯಕೀಯ ವಿಜ್ಞಾನ ಪದವಿ | ಬಿ.ವಿ.ಎಸ್ಸಿ |
| 29. ಪೂರ್ವಪಂಜಾಬ್ ವಿಶ್ವ ವಿದ್ಯಾನಿಲಯ ಸೋಲಾನ್ (1948–54) | ಪಶು ವೈದ್ಯಕೀಯ ವಿಜ್ಞಾನ ಪದವಿ | ಬಿ.ವಿ.ಎಸ್ಸಿ |

| | | | |
|---|---|---|---|
| 30. | ಪಂಜಾಬ್ ವಿಶ್ವವಿದ್ಯಾನಿಲಯ ಚಂಡೀಘಡ (1954-62) | ಪಶು ವೈದ್ಯಕೀಯ ವಿಜ್ಞಾನ ಪದವಿ<br>ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ<br>ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 31. | ಪಂಜಾಬ್ ಕೃಷಿ ವಿಶ್ವ ವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 32. | ಪಂಜಾಬ್‌ರಾವ್ ಕೃಷಿ ವಿದ್ಯಾಪೀಠ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 33. | ರಾಜಾಸ್ಥಾನ ಕೃಷಿ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 34. | ರಾಜಾಸ್ಥಾನ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 35. | ರಾಜೇಂದ್ರ ಕೃಷಿ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 36. | ರಾಂಚಿ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 37. | ಸರ್ದಾರ್ ಪಟೇಲ್ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 38. | ಸೌಗಾರ್ ವಿಶ್ವ ವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಪದವಿ | ಬಿ.ವಿ.ಎಸ್ಸಿ |
| 39. | ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಪದವಿ | ಬಿ.ವಿ.ಎಸ್ಸಿ |
| 40. | ತಮಿಳುನಾಡು ಕೃಷಿ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಪದವಿ | ಬಿ.ವಿ.ಎಸ್ಸಿ |
| 41. | ಉದಯ್‌ಪುರ ವಿಶ್ವ ವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 42. | ಕೃಷಿ ವಿಜ್ಞಾನ ವಿಶ್ವ ವಿದ್ಯಾನಿಲಯ, ಹೆಬ್ಬಾಳ | ಪಶು ವೈದ್ಯಕೀಯ ವಿಜ್ಞಾನ ಪದವಿ | ಬಿ.ವಿ.ಎಸ್ಸಿ |
| 43. | ಉತ್ತರ ಪ್ರದೇಶ ಕೃಷಿ ವಿಶ್ವವಿದ್ಯಾನಿಲಯ, | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ ಪಂತ್‌ನಗರ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 44. | ಉತ್ಕಲ್ ವಿಶ್ವ ವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 45. | ವಿಕ್ರಮ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 46. | ಮೊಹನ್‌ಲಾಲ್ ಸುಖಾಡಿಯಾ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. |

| | | |
|---|---|---|
| 47. ಕೃಷಿ ಮತ್ತು ತಂತ್ರಜ್ಞಾನ ವಿಶ್ವ ವಿದ್ಯಾನಿಲಯ, ಶ್ರೀನಗರ, | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ ಜಮ್ಮು ಮತ್ತು ಕಾಶ್ಮೀರ | *ಬಿ.ವಿ.ಎಸ್ಸಿ ಮತ್ತು ಎ.ಹೆಚ್. |
| 48. ಹಿಮಾಚಲ ಪ್ರದೇಶ ಕೃಷಿ ವಿಶ್ವವಿದ್ಯಾನಿಲಯ ಪಶು ವೈದ್ಯಕೀಯ ಮತ್ತು ಪ್ರಾಣಿ ವಿಜ್ಞಾನ ಕಾಲೇಜು, ಪಾಲಂಪುರ (ಹೆಚ್.ಪಿ) | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | *ಬಿ.ವಿ.ಎಸ್ಸಿ ಮತ್ತು ಎ.ಹೆಚ್. |

* ಸದರಿ ಅಧಿನಿಯಮದ ಉದ್ದೇಶಕ್ಕಾಗಿ ಈ ವಿದ್ಯಾರ್ಹತೆಯನ್ನು 1990ರ ಜನವರಿ 12 ರಂದು ಅಥವಾ ಆ ತರುವಾಯ ಪ್ರದಾನ ಮಾಡಿದ್ದರೆ, ಅವು ಮನ್ನಣೆ ಪಡೆದ ಪಶು ವೈದ್ಯಕೀಯ ವಿದ್ಯಾರ್ಹತೆಯಾಗಿರತಕ್ಕುದು

| | | |
|---|---|---|
| 49. ಬಿರ್ಸಾ ಕೃಷಿ ವಿಶ್ವ ವಿದ್ಯಾನಿಲಯ, ಕಂಕೆ ರಾಂಚಿ (ಬಿಹಾರ್) | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. [ಈ ವಿದ್ಯಾರ್ಹತೆಯನ್ನು 1994ರ ಜನವರಿ 8 ರಂದು ಅಥವಾ ಆ ತರುವಾಯ ಪ್ರದಾನ ಮಾಡಿದ್ದರೆ ಅವು ಮೇಲ್ಕಂಡಂತೆ ಮನ್ನಣೆ ಪಡೆದ ವಿದ್ಯಾರ್ಹತೆ ಯಾಗಿರತಕ್ಕುದು.] |
| 50. ಚೌದರಿ ಚರಣಸಿಂಗ ಹರಿಯಾಣ ಕೃಷಿ ವಿಶ್ವವಿದ್ಯಾನಿಲಯ, ಹಿಸಾರೆ (ಹರಿಯಾಣ) | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವಿ | ಬಿ.ವಿ.ಎಸ್ಸಿ ಮತ್ತು ಎ.ಹೆಚ್. [ಈ ವಿದ್ಯಾರ್ಹತೆಯನ್ನು 991ರ ಅಕ್ಟೋಬರ್ 8 ರಂದು ಅಥವಾ ಆ ತರುವಾಯ ಪ್ರದಾನ ಮಾಡಿದ್ದರೆ ಅವು ಮೇಲ್ಕಂಡಂತೆ ಮನ್ನಣೆ ಪಡೆದ ವಿದ್ಯಾರ್ಹತೆಯಾಗಿರತಕ್ಕುದು.] |

ಡಿಪ್ಲೋಮಗಳು

| | | |
|---|---|---|
| 1.ಅಸ್ಸಾಂ ಪಶು ವೈದ್ಯಕೀಯ ಕಾಲೇಜು | ಪಶು ವೈದ್ಯಕೀಯ ವಿಜ್ಞಾನದ ಪದವೀಧರ | ಜಿ.ವಿ.ಎಸ್ಸಿ. |
| | ಪಶು ವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನಾ ಪದವೀಧರ | ಜಿ.ವಿ.ಎಸ್ಸಿ ಮತ್ತು ಎ.ಎಚ್. |
| 2. ಬಂಗಾಳ ಪಶು ವೈದ್ಯಕೀಯ ಕಾಲೇಜು | ಬಂಗಾಳ ಪಶು ವೈದ್ಯಕೀಯ ಕಾಲೇಜು ಪದವೀಧರ | ಜಿ.ಬಿ.ವಿ.ಸಿ. |
| | ಪಶು ವೈದ್ಯಕೀಯ ವಿಜ್ಞಾನ ಪದವೀಧರ | ಜಿ.ವಿ.ಎಸ್ಸಿ |

| | | |
|---|---|---|
| 3. ಬಿಹಾರ್ ಪಶು ವೈದ್ಯಕೀಯ ಕಾಲೇಜು | ಬಿಹಾರ್ ಪಶು ವೈದ್ಯಕೀಯ ಕಾಲೇಜು ಪದವೀಧರ | ಜಿ.ಬಿ.ವಿ.ಸಿ. |
| 4. ಮುಂಬೈ ಪಶು ವೈದ್ಯಕೀಯ ಕಾಲೇಜು | ಮುಂಬೈ ಪಶು ವೈದ್ಯಕೀಯ ಕಾಲೇಜು ಪದವೀಧರ | ಜಿ.ಬಿ.ವಿ.ಸಿ. |
| 5. ಮದ್ರಾಸು ಪಶು ವೈದ್ಯಕೀಯ | ಮದ್ರಾಸು ಪಶು ವೈದ್ಯಕೀಯ ಕಾಲೇಜು ಕಾಲೇಜು ಪದವೀಧರ | ಜಿ.ಎಂ.ವಿ.ಸಿ. |
| 6. ಪಂಜಾಬ್ ಪಶು ವೈದ್ಯಕೀಯ ಕಾಲೇಜು | ಲೈಸೆನ್ಸ್ ಪಡೆದ ಪಶು ವೈದ್ಯಕೀಯ ವೃತ್ತಿಗಾರ | ಎಲ್.ವಿ.ಪಿ |

(15-8-1947ರ ಮೊದಲು ಪ್ರದಾನಮಾಡಿದ್ದು)

## ಎರಡನೇ ಅನುಸೂಚಿ

**(2 (ಇ) ಪ್ರಕರಣ ಮತ್ತು 16ನೇ ಪ್ರಕರಣ ನೋಡಿ)**

**ಭಾರತದ ಹೊರಗಿನ ಸಂಸ್ಥೆಗಳು ಪ್ರದಾನ ಮಾಡಿದ ಮನ್ನಣೆ ಪಡೆದ ಪಶು ವೈದ್ಯಕೀಯ ಅರ್ಹತೆಗಳು**

| ದೇಶ ಮತ್ತು ಸಂಸ್ಥೆ | ಮನ್ನಣೆ ಪಡೆದ ಪಶು ವೈದ್ಯಕೀಯ ಅರ್ಹತೆ | ನೋಂದಣಿಗಾಗಿ ಸಂಕೇತಾಕ್ಷರಗಳು |
|---|---|---|
| **ಯುನೈಟೆಡ್‌ಕಿಂಗ್‌ಡಂ** | | |
| 1. ರಾಯಲ್ ಕಾಲೇಜ್ ಆಫ್ ವೆಟರಿನರಿ ಸರ್ಜನ್ಸ್ | ರಾಯಲ್ ಕಾಲೇಜ್ ಆಫ್ ವೆಟರಿನರಿ ಸರ್ಜನ್ಸ್ ಸದಸ್ಯ | ಎಂ.ಆರ್.ಸಿ.ವಿ.ಎಸ್. |
| 2. ಬ್ರಿಸ್ಟಲ್ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಪದವಿ | ಬಿ.ವಿ.ಎಸ್‌ಸಿ |
| 3. ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಪದವಿ | ಬಿ.ವಿ.ಎಸ್‌ಸಿ |
| 4. ಎಡಿನ್‌ಬರ್ಗ್ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಪದವಿ | ಬಿ.ವಿ.ಎಸ್‌ಸಿ |
| 5. ಗ್ಲಾಸ್ಗೋ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಪದವಿ | ಬಿ.ವಿ.ಎಸ್‌ಸಿ |
| 6. ಲಿವರ್‌ಪೂಲ್ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ವಿಜ್ಞಾನ ಪದವಿ | ಬಿ.ವಿ.ಎಸ್‌ಸಿ |
| 7. ಲಂಡನ್ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ಔಷಧ ಪದವಿ | ಬಿ.ವಿ.ಎಂ. |
| **ಐರ್ಲೆಂಡ್ ಗಣರಾಜ್ಯ:** | | |
| 8. ಡಬ್ಲಿನ್ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ಔಷಧ ಪದವಿ | ಬಿ.ವಿ.ಎಂ. |
| 9. ಐರ್ಲೆಂಡಿನ ರಾಷ್ಟ್ರೀಯ ವಿಶ್ವವಿದ್ಯಾನಿಲಯ | ಪಶು ವೈದ್ಯಕೀಯ ಔಷಧ ಪದವಿ | ಬಿ.ವಿ.ಎಂ. |

**ಸ್ಲೊವ್ಯಾಕ್ ಗಣರಾಜ್ಯ:**

| | | |
|---|---|---|
| 10. ಯುನಿವರ್ಸಿಟಿ ಆಫ್ ವೆಟೆರಿನೆರಿ ಮೆಡಿಸನ್, ಕೋಸೈಸ್, ಸ್ಲೊವ್ಯಾಕ್ ಗಣರಾಜ್ಯ | (ಡಿಪ್ಲೊಮೋ) ಡಾಕ್ಟರ್ ಆಫ್ ವೆಟೆರಿನೆರಿ ಮೆಡಿಸನ್– ಎಂ.ವಿ. ಡಾಕ್ಟರ್ | ಎಂ.ವಿ. ಡಾಕ್ಟರ್ (ಈ ವಿದ್ಯಾರ್ಹತೆಯನ್ನು 2005ರ ಅಕ್ಟೋಬರ್ 30 ರಂದು ಅಥವಾ ಆ ತರುವಾಯ ಪ್ರದಾನ ಮಾಡಿದಾಗ ಅದು ಭಾರತೀಯ ವಿಶ್ವವಿದ್ಯಾನಿಲಯಗಳ ಬಿ.ವಿ.ಎಸ್.ಸಿ. ಮತ್ತು ಎ.ಎಚ್. ಪದವಿಗೆ ಸಮಾನವಾದ ವಿದ್ಯಾರ್ಹತೆಯಾಗಿರುವುದಾಗಿ ಮನ್ನಣೆ ನೀಡತಕ್ಕುದು) |

**ಸೋವಿಯತ್ ಸೋಷ್ಯಲಿಸ್ಟ್ ಸಂಯುಕ್ತ ಗಣರಾಜ್ಯ:**

| | | |
|---|---|---|
| 11. ಮಾಸ್ಕೋ ಸ್ಟೇಟ್ ಅಕಾಡೆಮಿ ಆಫ್ ವೆಟೆರಿನೆರಿ ಅಂಡ್ ಬಯೋಟೆಕ್ನಾಲಜಿ, ಮಾಸ್ಕೋ | (ಡಿಪ್ಲೊಮೋ) ಪಶು ವೈದ್ಯಕೀಯ ವಿಜ್ಞಾನದಲ್ಲಿ ಮಾಸ್ಟರ್ | ಎಂ.ಎಸ್.ವಿ. (ಈ ವಿದ್ಯಾರ್ಹತೆಯನ್ನು 2005ರ ಅಕ್ಟೋಬರ್ 30 ರಂದು ಅಥವಾ ಆ ತರುವಾಯ ಪ್ರದಾನ ಮಾಡಿದಾಗ ಅದು ಭಾರತೀಯ ವಿಶ್ವವಿದ್ಯಾನಿಲಯಗಳ ಬಿ.ವಿ.ಎಸ್.ಸಿ. ಮತ್ತು ಎ.ಎಚ್.ಪದವಿಗೆ ಸಮಾನವಾದ ವಿದ್ಯಾರ್ಹತೆಯಾಗಿರುವುದಾಗಿ ಮನ್ನಣೆ ನೀಡತಕ್ಕುದು) |
| 12. ಎನ್.ಎಂ. ಬೋರಿಸೆಂಕೋ ಜೂ ವೆಟೆರಿನೆರಿ ಇನ್ಸಿಟ್ಯೂಟ್, ಕಾರ್ಕೋ, ಉಕ್ರೇನ್ | (ಡಿಪ್ಲೊಮೋ) ಪಶು ವೈದ್ಯಕೀಯ ವಿಜ್ಞಾನದಲ್ಲಿ ಮಾಸ್ಟರ್ | ಎಂ.ಎಸ್.ವಿ.ಎಂ. (ಈ ವಿದ್ಯಾರ್ಹತೆಯನ್ನು 2005ರ ಅಕ್ಟೋಬರ್ 30 ರಂದು ಅಥವಾ ಆ ತರುವಾಯ ಪ್ರದಾನ ಮಾಡಿದಾಗ ಅದು ಭಾರತೀಯವಿಶ್ವವಿದ್ಯಾಯಗಳ ಬಿ.ವಿ.ಎಸ್.ಸಿ. ಮತ್ತು ಎ.ಎಚ್.ಪದವಿಗೆ ಸಮಾನವಾದ ವಿದ್ಯಾರ್ಹತೆಯಾಗಿರುವುದಾಗಿ ಮನ್ನಣೆ ನೀಡತಕ್ಕುದು) |

ಟಿ.ಕೆ. ವಿಶ್ವನಾಥನ್
ಕಾರ್ಯದರ್ಶಿ,
ಭಾರತ ಸರ್ಕಾರ.

* * * *